GURUDATTARAYANA CHARITRE

BY

R. TATA, M.A., L.T.

PUBLISHED

AT THE

Sathee Hitaishinee Matru Mandiram

NANJANGUD

First Edition 1000 Copies.

PRINTED AT THE

DHARMA PRAKASH PRESS

MANGALORE

1919

Rights Reserved by the Author.

Price 0-10-0.

Helyer H
0.50
SHELF LISTED
NATIONAL LIBRARY
NO. 4912
DATE 8.3.61
CALCUTTA
Ram
T 362 g

PREFACE.

THE desire to possess anything more than absolutely necessary is an evil according to the Jaina **Sastras.** A classical illustration of the consequences of such a desire is the story of Gurudatta, who, after a series of births, becomes, by righteous conduct, a Kevalin. The present work in dramatic form is based on Nyayasena's account of Gurudatta in his **Dharmamrita.** It differs from the original in many new ideas, and passages, and in the omission of the account of the Kaliyuga or **avasarpini.** Some Magadhi stanzas from the **Sravakachara** of **Vasunandyacharya** have been introduced to serve as texts for the sermons of the Jaina **gurus** in the drama.

I am alive to the many defects that a learned critic might easily discover in a work of this kind written during my leisure moments for a Kannada Journal. I shall be thankful to scholars interested in Kannada who will kindly help me with their valuable suggestions and criticisms on this work, which however destructive will undoubtedly render my leisure hour service to the language more profitable to myself and less painful to the reading public.

I am thankful for the inclusion of this work in the Satihitaishini Series.

R. Tata.

ಮುನ್ನುಡಿ.

ಪರಿಮಿತಿಯಿಲ್ಲದ ಬಹ್ವಾರಂಭಪರಿಗ್ರಹಗಳಿಂದ ಜೀವಿಗೆ ಬಾಧೆಯಾಗುವುದೆಂದು ಜೈನಶಾಸ್ತ್ರದಲ್ಲಿ ಹೇಳಿರುವುದು. ಇದಕ್ಕನು ಸಾರವಾಗಿ ಧರ್ಮಾಮೃತದಲ್ಲಿ ಹೇಳಿರುವ ಗುರುದತ್ತರಾಯನ ಕಥೆಯ ಆಧಾರದಿಂದ ಈ ಗ್ರಂಥವನ್ನು ನಾಟಕರೂಪವಾಗಿ ಬರೆದಿರುವೆನು. ಮೂಲಗ್ರಂಥದಲ್ಲಿರುವ ಅವಸರ್ಪಿಣಿಯ ಕಾಲದ ಸ್ವಭಾವವನ್ನು ಇದರಲ್ಲಿ ಹೇಳಿಲ್ಲ. ಜೈನಯತಿಗಳು ಮಾಡುವ ಧರ್ಮೋಪದೇಶದಲ್ಲಿ ಪಾತ್ರಕ್ಕೆ ತಕ್ಕ ಭಾಷೆಯಿರಬೇಕೆಂದು ವಸುನಂದ್ಯಾಚಾರ್ಯರ ಶ್ರಾವಕಾಚಾರದಿಂದ ಕೆಲವು ಮಾಗಧೀಭಾಷೆಯ ಪದ್ಯಗಳನ್ನು ತೆಗೆದು ಸೇರಿಸಿದೆ. ಮೂಲಗ್ರಂಥದಲ್ಲಿ ಕಾಣದಿರುವ ಇನ್ನೂ ಕೆಲವು ವಿಷಯಗಳನ್ನು ಇಲ್ಲಿ ಕಾಣಬಹುದು. ಪದ್ಯಗಳಲ್ಲಿ ಹಳಗನ್ನಡವನ್ನೂ ಗದ್ಯಗಳಲ್ಲಿ ಹೊಸಗನ್ನಡವನ್ನೂ ಬರೆದಿರುವುದರಿಂದ ಇದರಲ್ಲಿ ಗುಣದೋಷಗಳನ್ನು ಕಂಡುಹಿಡಿಯುವುದು ಸುಲಭವಾಗಿರಬಹುದು.

ಭಾಷಾಭಿಮಾನಿಗಳಾದ ಪಂಡಿತರು ಇದರಲ್ಲಿರುವ ದೋಷಗಳನ್ನು ತಿಳಿಸುವುದರಿಂದ ಈ ಅಲ್ಪಜ್ಞನು ಮಾಡುತ್ತಿರುವ ಭಾಷಾಸೇವೆಗೆ ಸಹಾಯವಾಗುವುದೆಂದರಿತು ಅವರಿಗೆ ಕೃತಜ್ಞನಾಗಿರುವೆನು.

ಶ್ರೀಃ

ಸಮರ್ಪಣೆ

ಗುಣಮಂ ನೋಡದೆ ದೋಷಮಂ ಬಗೆದು ಪೇಳ್ವಣ್ಣಂಗಳಂ ಮುನ್ನಮಾ
ನಣುಗಿಂ ಬಂದಿಸುವೆಂ ಬಳಿಕ್ಕೆರಗುವೆಂ ಸಾರಸ್ವತಾಧಾರಧೀ
ಮಣಿಗಳ್ಗಿನ್ನಯ ಮಾತೆ ನಿನ್ನ ಪದಪದ್ಮಂಗಳ್ಗೆ ಸದ್ಭಕ್ತಿಯಿಂ
ಮಣಿವೆಂ ಶ್ರೀ ಗುರುದತ್ತರಾಯನ ಚರಿತ್ರಂ ಕಾಣ್ಕೆಯಾಗಿರ್ಪಿನಂ ||

ಅರಿದರ ಬಳಿಯೊಳ್ ಕಲ್ಲದ
ನರಿಯುಮೆಯಂ ಮೆರೆಗುಮೆಂದು ಜರೆಯದಿರೆನ್ನಂ
ಕಿರಿದಪ್ಪಿದರೊಳ್ ಭಕ್ತನ
ತರಿಸಲವಂ ಮಾತೆ ಕಂಡು ಮನ್ನಿಪುದಣುಗಿಂ ||

ಬಡಗಣ ಗಡಿಗಾಪಿನವಂ
ಗೆಡೆಯಿಲ್ಲಂ ತೆಂಕನಾಡಿನೊಳಿಗದೊಳ್ ಕ
ನ್ನಡ ಮಾತೇ ನಿನಗೆನ್ನಿ
ಪ್ಪೆಡೆಯಿಂದಿದನಟ್ಟಿ ಭಕ್ತಿಯಿಂ ಪೊಡೆಮಡುವೆಂ ||

ಪಡೆದು ನುಡಿಗಲಿಸಿ ನಡಪಿ
ಬಡಗಣ ಪೆರ್ದೊರೆಗೆ ನೂಂಕಿಯುಡಿಯೊಳಿಗದೊಳ್
ಬಿಡದೆನ್ನಂ ನಿರಿಸಿದ ಕ
ನ್ನಡ ಮಾತೇ ನಿನ್ನಪದದೊಳಿದನಪ್ಪಿಸುವೆಂ ||

ಅಣುಗಿನ ಮಗನೆನ್ನದೆ ಬಡ
ಗಣದೆಸೆಗಟ್ಟಿದೊಡಮೆನ್ನನೊಲವಿಂದಂ ತೆಂ
ಕಣದೆಸೆಗಂ ನಿನ್ನಡಿಗಂ
ಮಣಿಯದಿರೆಂ ಜೀವಮೊಡಲೊಳುಳ್ಳನ್ನವರಂ ||

ಶ್ರೀಃ

ಶ್ರೀವೀತರಾಗಾಯ ನಮಃ

ಗುರುದತ್ತರಾಯನ ಚರಿತ್ರೆ

|| ನಾಂದಿ ||

ಪರಮ ಶ್ರೀಗೇಹ ಪಾದಾಂಬುಜಯುಗಳತಳಾನಮ್ರ ಚಾತುರ್ನಿಕಾಯಾ। ಮರನಾನಾಮೌಳಿಮಾಲಾ ಮಣಿಗಣರುಚಿರಂ ಕೇವಲಜ್ಞಾನಭಾಭಾ। ಸುರಲೋಕಾಲೋಕಚಕ್ರಂ ಲಸದಮೃತವಚೋಂಭಃಪೃಷತ್ತೃಪ್ತಭವ್ಯೋ ತ್ಕರ ಚೇತಶ್ಚಾತಕಂ ಮೊಳ್ಕೆಮಗತಿ ಶುಭಮಂ ಶ್ರೀಜಗನ್ನಾಥದೇವಂ ॥

(ನಾಂದಿಯಾದ ಬಳಿಕ ಸೂತ್ರಧಾರನು ಅಂಜಲಿಯಲ್ಲಿದ್ದ ಪುಷ್ಪಗಳನ್ನು ರಂಗದಲ್ಲಿ ಚೆಲ್ಲಿ ಸಭೆಗೆ ವಂದಿಸಿ ತೆರೆಯತ್ತ ನೋಡಿ)

ಸೂತ್ರಧಾರ:— ಎಲೈ ಪಾರಿಪಾರ್ಶ್ವಕನೆ, ಇತ್ತ ಬಾ.

ಪಾರಿಪಾರ್ಶ್ವಕ:— (ಬಂದು ಕೈಮುಗಿದು) ಬಂದಿರುವೆನು, ಏನಪ್ಪಣೆ?

ಸೂತ್ರಧಾರ:— ಪೂಜ್ಯರಾದ ಈ ಸಭಾಸದರನ್ನು ನೂತನವಾದ ಜೈನ ನಾಟಕಾಭಿನಯದಿಂದ ಆನಂದಗೊಳಿಸುವುದು ನಮಗೆ ಈಗ ಕರ್ತವ್ಯವಾಗಿರುವುದು.

ಪಾರಿ:— ಕಾಳಿದಾಸಾದಿ ಮಹಾಕವಿಗಳಿಂದ ರಚಿತವಾದ ನಾಟಕಗಳಲ್ಲಿ ಪೂರ್ಣಪರಿಚಯವಿರುವ ಈ ಮಹನೀಯರನ್ನು ಸಂತೋಷಗೊಳಿಸುವ ನೂತನ ಜೈನನಾಟಕವಾವುದಿರುವುದು?

ಸೂತ್ರ:— ಪೂರ್ವಕವಿಗಳು ರಚಿಸಿರುವ ನಾಟಕಗಳ ಒರೆಗೆ, ನೂತನ ನಾಟಕಗಳು ಬಾರದಿದ್ದರೂ, ನಿರ್ಮತ್ಸರರಾದ ಈ ಸಭಾಸದರು ನೂತನನಾಟಕವೆಂದು ಗುರುದತ್ತರಾಯನ ಚರಿತ್ರೆಯನ್ನು ತಿರಸ್ಕರಿಸದೆ ಗುಣೈಕಪಕ್ಷಪಾತಿಗಳಾಗಿರುವರು.

ಪಾರಿ:— ಆ ನಾಟಕವನ್ನು ರಚಿಸಿದವರಾರು?

ಸೂತ್ರ: ರತ್ನಾವಳೀ, ಹರಿಶ್ಚಂದ್ರ, ಸತ್ಯವರ್ಮಚರಿತ್ರೆ, ರಾಮಧೂತ ವಿಜಯ, ಪ್ರಹ್ಲಾದ ಚರಿತ್ರೆ— ಮೊದಲಾದ ನಾಟಕಗಳನ್ನು ರಚಿಸಿದ ಶ್ರೀನಿವಾಸ ರಾಜಕವಿಯ ಪುತ್ರರಾದ ತಾತಾಚಾರ್ಯರು ಈ ಗುರುದತ್ತರಾಯನ ಚರಿತ್ರೆ ಯನ್ನು ರಚಿಸಿರುವರು.

ಪಾರಿ:— ಓಹೋ, ತಿಳಿದೆನು! ಕಾವೇರಿಯಿಂದಮಾಗೋದಾವರಿವರಮಿ ರ್ಪ್ಪ ಕನ್ನಡ ನಾಡಿನ ಬಡಗಣ ದಿಕ್ಕಿನಲ್ಲಿ. ಅನ್ಯರಾಜರಪೋಷಣೆಯಲ್ಲಿರುವವರೂ ಸ್ವದೇಶಸೇವೆಯಲ್ಲಿ ತತ್ಪರರಾಗಿರುವವರೂ ಇವರೇ ಅಹುದಷ್ಟೆ? ಇವರು ಈ ನಾಟಕವನ್ನು ಆಂಧ್ರಭಾಷೆಯಿಂದ ಕನ್ನಡಿಸಿ ಬರೆದಿರುವರೋ?

ಸೂತ್ರ:— ಬಹ್ವಾರಂಭಪರಿಗ್ರಹಗಳು ಜೈನಧರ್ಮಕ್ಕೆ ವಿರೋಧವೆಂದು ಬೋಧಿಸುವ ಗುರುದತ್ತರಾಯನ ಚರಿತ್ರೆಯನ್ನು ಧರ್ಮಾಮೃತವೆಂಬ ಗ್ರಂಥದ ಆಧಾರದಿಂದ ಬರೆದಿರುವರು.

ಪಾರಿ:— ಧರ್ಮಾಮೃತವೆಂಬ ಕಾವ್ಯವು ಆಂಧ್ರಭಾಷೆಯಲ್ಲಿರುವುದೋ?

ಸೂತ್ರ:— ಆಂಧ್ರಭಾಷೆಯಲ್ಲಿ ಜೈನಕಾವ್ಯಗಳೇ ಇಲ್ಲ.

ಪಾರಿ:— ಜೈನರು ಕರ್ನಾಟ ದ್ರಾವಿಡಭಾಷೆಗಳಲ್ಲಿ ಅನೇಕ ಕಾವ್ಯಗಳನ್ನು ರಚಿಸಿರುವರೆಂದು ಕೇಳಿರುವೆನು. ಆಂಧ್ರಭಾಷೆಯಲ್ಲಿ ಜೈನಕಾವ್ಯಗಳಿಲ್ಲವೆಂಬುದು ಆಶ್ಚರ್ಯವಾಗಿರುವುದು.

ಸೂತ್ರ:— ಆಂಧ್ರದೇಶದಲ್ಲಿ ಜೈನವಾಕ್ಚಂದ್ರಿಕೆಗೆ ಅವಕಾಶವಿಲ್ಲ.

ಪಾರಿ:— ಗುರುದತ್ತರಾಯನಚರಿತೆಯೇ ಜೈನನಾಟಕಗಳಲ್ಲಿ ಮೊದಲನೆ ಯದೋ?

ಸೂತ್ರ:— ಅಲ್ಲ. ಕನ್ನಡದಲ್ಲಿ ಅನೇಕ ಜೈನನಾಟಕಗಳಿದ್ದುವು.

(ತೆರೆಯೊಳಗೆ ವಾದ್ಯಗಳಾಗುವುವು.)

ಪಾರಿ:— (ತೆರೆಯುತ್ತ ನೋಡಿ) ಓಹೊ, **ಉಪರಿಚಿತಮಹಾರಾಜನು** ಆಗಲೇ ಸಿಂಹಾಸನವನ್ನೇರಿರುವನು. ಇನ್ನು ಮುಂದಿನ ಕಾರ್ಯಗಳಲ್ಲಿ ನಾವು ಜಾಗರೂಕರಾಗಿ ಇರಬೇಕು. (ಎಂದು ಇಬ್ಬರೂ ಹೋಗುವರು)

ಇದು ಪ್ರಸ್ತಾವನೆ.

ಶ್ರೀಮತ್ಪಂಚಗುರುಭ್ಯೋ ನಮಃ

ಪ್ರಥಮಾಂಕ.

ಗರ್ಭಾಂಕ ೧.

ಶ್ರಾವಸ್ತಿನಗರದ ಉಪರಿಚಿತಮಹಾರಾಜನ ಆಸ್ಥಾನ.

(ಮಹಾರಾಜನೂ ಮಂತ್ರಿಗಳೂ ಉಚಿತಾಸನಗಳಲ್ಲಿ ಕುಳಿತಿರುವರು.)

ರಾಜ:—

|| ಕಂದ || ಅರಸಿಯರ್ಕೈನೂರ್ವರ್ರೊಳೊಂ
ದರಗಳಿಗೆಯ ಸೌಖ್ಯಕಾಯೊಡಂ ತೆರಪಿಲ್ಲೀ
ಅರಸುತನಂ, ಸಚಿವರ್ ನೀ
ವಿರೆಯುಂ, ನಮಗಿನಿತು ಹಿತಮನೆಸಗಲೆವೇಡಾ? || ೧ ||

ಮಂತ್ರಿ:— ಮಹಾರಾಜನೆ, ಲಾಲಿಸು. ರಾಜಾಜ್ಞೆಯನ್ನು ಶಿರಸಾವಹಿಸಿಕೊಂಡು ನಾವುಗಳೇ ನಡಯಿಸಬಹುದಾದ ಕೆಲಸಗಳೆಲ್ಲವನ್ನು ನಡೆಯಿಸುತ್ತ ಬಂದೆವು. ಕೆಲಕೆಲವು ವಿಷಯಗಳಲ್ಲಿ ಪ್ರಭುಚಿತ್ತವನ್ನರಿಯದೆ ಇತ್ಯರ್ಥಮಾಡುವುದು ಅಮಾತ್ಯಲಕ್ಷಣಕ್ಕೆ ವಿರುದ್ಧವಾದುದರಿಂದ ಆ ವಿಷಯಗಳನ್ನು ಮಾತ್ರವೇ ಸನ್ನಿಧಾನದಲ್ಲಿ ಅರಿಕೆ ಮಾಡಿಕೊಳ್ಳುವೆನು.

ರಾಜ:— ಮಂತ್ರಿವರ್ಯ! ಹಾಗೆಯೇ ಮಾಡು.

ಮಂತ್ರಿ:— ಅಪ್ಪಣೆ (ಎಂದು ಕೆಲವು ಪತ್ರಗಳನ್ನು ತೆಗೆದು ನೋಡಿ) ವಿದ್ಯಾಗುರುಗಳಲ್ಲಿ ಅಗ್ರಗಳನಾದ ಸ್ವಯಂಬುದ್ಧದೇವನಿಂದ ಬಂದ ಪತ್ರವಿದು. ಜಾತಿಮತಭೇದಗಳಿಲ್ಲದೆ, ಸ್ತ್ರೀಪುರುಷರೆನ್ನದೆ, ಧನಿಕ ದರಿದ್ರರೆನ್ನದೆ, ನಮ್ಮದೇಶದಲ್ಲಿ ಎಲ್ಲರಿಗೂ ಶಸ್ತ್ರವಿದ್ಯೆಯನ್ನು ಕಲಿಸಬೇಕೆಂದು ಬರೆದಿರುವರು.

ರಾಜ:— ಸ್ವಯಂಬುದ್ಧದೇವನಿಗೆ ಈಗಾವುದೋ ಯುದ್ಧದ ಭಯವು ಹಿಡಿದಂತೆ ಕಾಣುವುದು. ಆದರೂ ಸೂಚನೆ ಒಪ್ಪತಕ್ಕುದಾಗಿರುವುದು. ಕಾರ್ಯವು ನೆರವೇರುವುದಕ್ಕೆ ಸಾಧನಸಾಮಗ್ರಿಗಳೂ, ಶಿಕ್ಷಕರೂ ಬೇಡವೇ?

ಮಂತ್ರಿ:— ಈಗ ನಮ್ಮ ನಾಡಿನಲ್ಲಿರುವ ಸಾಧನಸಂಪತ್ತಿಯೇ ಸಾಕು. ಶಿಕ್ಷಕಜನರನ್ನು ಬಿಟ್ಟು ಬೇರೆ ಶಿಕ್ಷಕರೂ ಬೇಡ.

ರಾಜ:— ಕಾಲಕ್ಕೆ ತಕ್ಕವಿದ್ಯೆಯನ್ನು ಕಲಿಸುವ ಶಿಕ್ಷಕರು ದೊರಕದೆ ಹೋದರೆ ಮುಂದಿನವರ್ಷಕ್ಕೆ ಆಲೋಚಿಸಬಹುದು. ಮತ್ತೇನು?

ಮಂತ್ರಿ: — (ಬರೆದುಕೊಂಡು ಬಳಿಕ) ಒಕ್ಕಲಿಗರಿಂದ ಕಂದಾಯದ ಹಣವು ಸರಿಯಾಗಿ ಬರುವುದಿಲ್ಲ. ಮಳೆಬೆಳೆಗಳಿಲ್ಲದಿರುವುದೊಂದು ಪ್ರಬಲವಾದ ಕಾರಣ, ಅದಲ್ಲದೆ ನಾಟಕದ ಸಂಘಗಳು ಊರೂರಿಗೆ ನಾಲ್ಕಯ್ದಾಗಿ ಒಕ್ಕಲಿಗರಿಗೆ ವರ್ಷವೊಂದಕ್ಕೆ ಒಬ್ಬೊಬ್ಬನಿಗೆ ೩೦ ರೂಪಾಯಿಗಳಾಗುವುವು. ವರ್ತಕರು ನಿಷ್ಕಾರಣವಾಗಿ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದರಿಂದ ಬಹುಜನರಿಗೆ ಜೀವನಕ್ಕೆ ಕಷ್ಟವಾಗಿರುವುದು. ಆದುದರಿಂದ ವರ್ಷದ ಕಂದಾಯದ ಹಣವನ್ನು ಪೀಡಿಸಿ ತರಬೇಕೆಂದು ಪ್ರಯತ್ನಪಟ್ಟವರನ್ನು ಒಕ್ಕಲಿಗರು ಹೊಡೆದು ಹಿಂಸೆಮಾಡಿ ಓಡಿಹೋಗಿರುವರು; ವರ್ತಕರ ಅಂಗಡಿಗಳನ್ನು ಸೂರೆಮಾಡಿ ಸರಕುಗಳನ್ನು ಎತ್ತಿಕೊಂಡು ಹೋದರು. ಇಷ್ಟೊಂದು ಅನರ್ಥವೂ ಅರಮನೆಗೆ ಸರಕುಗಳನ್ನು ಸಾಗಿಸುವುದರಿಂದ ಬಂದುದೆಂದು ಜನರು ಹೇಳಿಕೊಳ್ಳುತ್ತಿರುವರು. ಆದುದರಿಂದ ಇದಕ್ಕೆ ತಕ್ಕ ವ್ಯವಸ್ಥೆಯಾಗಬೇಕು.

ರಾಜ: — ಕಂದಾಯದ ಹಣವನ್ನು ಬಿಟ್ಟುಬಿಡಬಹುದು. ನಾಟಕದವರಿಗೆ ಅರಮನೆಯಿಂದ ಸಂಬಳವನ್ನು ಕೊಡಿಸಿ ಪ್ರಜೆಗಳಿಗೆ ಅದರಿಂದ ವೆಚ್ಚವಾಗದಂತೆ ಮಾಡತಕ್ಕುದು; ವರ್ತಕರಿಗೆ ನಷ್ಟವಾಗದಂತೆ ಸರಕುಗಳನ್ನು ಕೊಂಡುಕೊಂಡು ನಮ್ಮ ವಶದಲ್ಲಿಟ್ಟುಕೊಂಡು ಸುಲಭಕ್ರಯಕ್ಕೆ ನಾವೇ ಮಾರತಕ್ಕುದು. ಮತ್ತೇನು?

ಮಂತ್ರಿ: — ಕೆಲವರು ನೂರಾರು ಪತ್ನಿಯರನ್ನಿಟ್ಟುಕೊಂಡಿರುವುದರಿಂದ ಮತ್ತೆ ಕೆಲವರು ಅಭಾವದಿಂದ ವಿರಕ್ತರಾಗಿ ಸಂಚರಿಸುತ್ತಿರುವರು. ಇಂಥವರು ದೇಶಕ್ಕಾಗಲಿ, ತಮಗಾಗಲಿ, ಆವ ಉಪಕಾರವನ್ನೂ ಮಾಡುವುದಿಲ್ಲ; ಇಂಥವರ ಪೋಷಣೆ ಜನರಿಗೆ ಸೇರಿರುವುದರಿಂದ ಜನರಿಗೆ ಬಹುವಿಧವಾದ ಸಂಕಟಗಳು ಪ್ರಾಪ್ತವಾಗಿವೆ.

ರಾಜ: — ಅಂಥ ವಿರಕ್ತರನ್ನು ದೇಶದಿಂದೋಡಿಸುವುದಕ್ಕಾದರೆ ಸರಿ; ಇಲ್ಲದಿದ್ದರೆ ಅವರಿಗೆ ಮದುವೆಯನ್ನು ನಾವೇ ಮಾಡಿಸಬೇಕಾಗುವುದು.

ಮಂತ್ರಿ: — ಅವರವರಿಗೆ ತಕ್ಕ ಕುಲಸ್ತ್ರೀಯರು. ದೊರಕುವುದು ಪ್ರಯಾಸವಾದುದರಿಂದ ಮನಸ್ವೀ ಮದುವೆ ಮಾಡಿಕೊಂಡರೆ ನ್ಯಾಯಕ್ಕೆ ವಿರೋಧವಾಗದೆಂದು ಪ್ರಭುವಿನ ಆಜ್ಞೆಯಾದರೆ ಸಾಕು.

ರಾಜ: — ಇದಕ್ಕೆ ಈಗ ರಾಜಾಜ್ಞೆಯಾಗಬೇಕೆ? ಪುರಾಣೇತಿಹಾಸಗಳಲ್ಲಿ ಹೇಳಿರುವ ವರ್ಣಸಂಕರಕ್ಕೆ ನಮ್ಮ ಅಡ್ಡಿಯೇನು? ಹಾಗೆ ನಾವು ನಡೆದ

ಮಾತ್ರಕ್ಕೆ ಅಂಥ ವ್ಯಾಪಾರಗಳನ್ನು ನಿಲ್ಲಿಸುವುದು ಹೇಗೆ? ಇದನ್ನೆಲ್ಲಾ ನೋಡಿದರೆ ಮದುವೆಯೇ ಬೇಡ. ಮದುವೆಮಾಡಿ ಕೊಳ್ಳುವುದೇಕೆ? ಹೆಂಗಸರಾಗಲಿ ಗಂಡಸರಾಗಲಿ ಇದರಿಂದ ಪಡೆಯುವ ಸುಖವೇನು? ಅದು ಮದುವೆಯಾದಲ್ಲದೆ ಆಗುವುದಿಲ್ಲವೋ? ಈ ವಿಷಯದಲ್ಲಿ ಇನ್ನೂ ಪ್ರಜೆಗಳು ಏನೇನು ಹೇಳುವರೋ ತಿಳಿದ ಮೇಲೆ ಇದರ ವ್ಯವಸ್ಥೆಯಾಗಬಹುದು.

ಮಂತ್ರಿ:— ವಿದೇಶಯಾತ್ರೆಯಿಂದ ನಮ್ಮ ದೇಶದಲ್ಲಿ ಬಹುಜನರಿಗೆ ದೇಶಭಕ್ತಿ, ರಾಜಭಕ್ತಿ, ದೈವಭಕ್ತಿ, ಗುರುಭಕ್ತಿ ಎಂಬೀ ನಾಲ್ಕು ಭಕ್ತಿಗಳೂ ಲೋಪವಾಗಿರುವುವೆಂದು ಕರ್ಣಾಕರ್ಣಿಕೆಯಿಂದ ತಿಳಿದಿರುವೆನು. ಇಂಥವರು ಪ್ರಬಲರಾಗದಂತೆ ಮುಟ್ಟವಿಡದಿದ್ದರೆ ಇತರ ಜನರೂ ಅವರಂತೆ ಭಕ್ತಿಶೂನ್ಯರಾಗಿ ದೇಶಕ್ಕೆ ಕಂಟಕಪ್ರಾಯರಾಗುವರು.

ರಾಜ:— ಅಂಥವರ ವಿಷಯದಲ್ಲಿ ನಮಗೆ ರಹಸ್ಯವಾಗಿ ಅವರ ಗುಣದೋಷಗಳನ್ನು ಬರೆದು ತಿಳಿಸುವುದಕ್ಕೆ ಆಪ್ತರನ್ನು ನಿಯಮಿಸು. ದೋಷವಿರುವುದೆಂದು ಅವರು ಬರೆದರೆ ಅವರಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಬಹುದು.

ಮಂತ್ರಿ: — ದೋಷವನ್ನು ಮಾತ್ರವೇ ಹೇಳಿ ಗುಣವನ್ನು—

ರಾಜ:— ಬೇಡ, ತಪ್ಪೆಂದು ತಿಳಿದರೆ ಸಾಕು; ಗುಣವಿದ್ದರೆ ನಮಗೇನಾಯ್ತು? ಯಾರಲ್ಲಿ?

(ವನಪಾಲಕನು ಬರುವನು)

ವನ:— ಮಹಾಪ್ರಭುವಿಗೆ ಜಯವಾಗಲಿ. (ಕೈಮುಗಿದು ನಿಂತು)

॥ ಕಂದ ॥ ಅಳಿಯುಂ ಸರಸಿಜಮೆಂತಂ
ತಿಳೇಶನಂ ಧರಣಿಕಾಂತೆಯೆಂತಂತೊಲವಿಂ
ದೆಳಸುತೆ ಪಾರುತ್ತಿರ್ಕ್ಕುಂ
ತಿಳಿಗೊಳನುಂ ವನಮುಮರಸ ದೇವರಬರವಂ ॥ ೧ ॥

ಮತ್ತು

॥ ವೃತ್ತ ॥ ಇದೆಕೊಳ್ ಪಾಂಡ್ಯಾಂಗನಾಗಂಡಮನಲೆಯಿಸುತುಂ
ಕಂಚಿಮುಗ್ಧಾಂಗನಾಮಾ

ನದ ಭಂಗಕ್ಕಾಟಿಸುತ್ತುಂ ರತಿರಭಸಭರೀ ಚೋಳಸೀ
ಮಂತಿನೀ ಕೂಟದೆ
ತಳ್ಪೊಯ್ಯುತ್ತೆ ಕರ್ನಾಟಿಕೆಯರ ಕುರುಳಂ ಪಿಕ್ಕು
ತುಂ ಕುಂತಳೀ ಸ್ನೇ
ಹದೆ ಗಂಟಿಕ್ಕುತ್ತೆ ಬರ್ಕ್ಕುಂ ಮಳಯತಿಖರದಿಂ ಶೀ
ತಳಂ ಮಾತರಿಶ್ವಂ ||

ರಾಜ:— (ಸಂತೋಷದಿಂದ ವನಪಾಲಕನಿಗೆ ಪಾರಿತೋಷಕವನ್ನು ಕೊಟ್ಟು)

|| ಕಂದ || ಇನಿತುಂ ಕೊರತೆಯದಿಲ್ಲೆಂ
ಬಿನಮುಳವಡಿಸೆಮ್ಮ ವನವಿಹಾರಕ್ಕಿದೆಕೊಳ್ |
ನಿನಗಂ ಮುನ್ನಮೆ ನಾಂ ಬಂ
ದೆನೆಂದು ತಿಳಿ ಪೋಗುಬೇಗಮಾಗಳೆ ಬರ್ಪೆಂ || ೩ ||

ವನ:— ಅಪ್ಪಣೆ. (ಕೈಮುಗಿದು ಹೋಗುವನು.)

ರಾಜ:— (ಮಂತ್ರಿಯನ್ನು ನೋಡಿ.)

|| ಕಂದ || ನಂದನವನಮುಂ ಕೊಳನುಂ
ಬಂದ ಬಸಂತದೊಳೆ ಕಡುಮನೋಹರಮುದರಿಂ ||
ಸುಂದರಿಯರೆಲ್ಲರುಂ ಬ
ರ್ಕ್ಕೆಂದೀಗಳೆ ಮೊಳಗುಗೆಯ್ದೆ ಮಂಗಳವರೆಗಳ್ || ೪ ||

ಮಂತ್ರಿ:— ಆಗಬಹುದು.

ರಾಜ:— ನಾನಿನ್ನು ಹೊರಡುವೆನು. (ಹೋಗುವನು)

ಮಂತ್ರಿ:— ಯಾರಲ್ಲಿ?

ಸೇವಕ:— (ಬಂದು ಕೈಮುಗಿದು) ಏನಪ್ಪಣೆ?

ಮಂತ್ರಿ:— (ಪತ್ರಗಳೆಲ್ಲವನ್ನೂ ಜೋಡಿಸಿಕೊಂಡು ಸೇವಕನ ಕೈಗೆ ಕೊಡುವನು.)

ಸೇವಕ:— (ವಿನೀತನಾಗಿ ತೆಗೆದುಕೊಂಡು ದೂರದಲ್ಲಿ ನಿಲ್ಲುವನು)

ಮಂತ್ರಿ:— (ತನ್ನಲ್ಲಿ) ನಮ್ಮ ಮಹಾರಾಜನ ವಿವೇಕವು ಅಸ್ಮಾದೃಶವಾದುದು. ರಾಜಕಾರ್ಯವಾವುದಕ್ಕಾಗಲಿ ಕೇಳಿದೊಡನೆ ಹೀಗೆ ಹೀಗೆ ಎಂದು

ವಿಧಿಸುವನು. ರಾಜನೀತಿಯನ್ನು ಚೆನ್ನಾಗಿ ತಿಳಿದಿರುವನು. ಮನಸ್ಸಿಟ್ಟರೆ ಪ್ರಜಾಪರಿಪಾಲನವೆಂಬುದು ಈತನಿಗೆ ಒಂದರಗಳಿಗೆಯ ಕೆಲಸವಲ್ಲ. ಪ್ರಜೆಗಳಲ್ಲಿ ಈತನಿಗೆ ವಿಶ್ವಾಸವಿಲ್ಲದಿದ್ದರೆ ಇಷ್ಟೊಂದು ಕೆಲಸಗಳನ್ನು ಮಾಡುತ್ತಿರಲಿಲ್ಲ. ಈತನ ಅಪಾರಸಂಸಾರವೂ ಪ್ರಜಾಹಿತಕ್ಕೆಂದೇ ಇರಬಹುದೋ? (ಎಚ್ಚರ ಗೊಂಡಂತೆ ನಟಿಸಿ) ರಾಜನ ಗುಣವನ್ನು ವರ್ಣಿಸುತ್ತ ಧರ್ಮವನ್ನು ಮರೆತೆನು. ಹಾಗಲ್ಲ—

|| ಕಂದ || ಪರಿಮಿತಿಯಿಲ್ಲದಿವಂ ಬಹು
ಪರಿಗ್ರಹದೊಳಾದ ಮೋಹದಿಂದಂ ತನ್ನಿ
ರ್ದಿರವಂ ಬಗೆಯದೆ ತಿಂಬಂ
ಪಿರಿದಪ್ಪೀ ಭವದ ಕೃಪೆಯಂ ಪಲತೆರದಿಂ || ೫ ||

ಇರಲಿ, ರಾಜಾಜ್ಞೆಯಂತೆ ನಡೆಯುವೆನು. (ಸೇವಕನೊಡನೆ ಹೋಗುವನು)

ಗರ್ಭಾಂಕ ೨.

(ಭೇರಿಯನ್ನು ಹೊಡೆಯುತ್ತ ಇಬ್ಬರು ಬರುವರು.)

೧ನೆಯವ:— ಏನಯ್ಯ ಎಲ್ಲೆಲ್ಲಿ ತಿರುಗಿ ಬಂದೆ?

೨ನೆಯವ:— ವಿದ್ಯಾಲಯಗಳು, ಅಂಗಡಿಬೀದಿಗಳು, ಮಠಗಳು, ದೇವಾಲಯಗಳು, ಗ್ರಾಮರಕ್ಷಕರ ಸ್ಥಳಗಳು,— ಇಲ್ಲೆಲ್ಲಾ ಹೋಗಿ ಬಂದೆ. ನಿನ್ನದೇನು ಸಮಾಚಾರ?

೧:— ಏನೂ ಇಲ್ಲ. (ಟೊಂಕವನ್ನು ಸವರಿಕೊಳ್ಳುತ್ತ) ಅಗ್ರಹಾರಗಳು, ಸೂಳೆಗೇರಿಗಳು, ದೊಡ್ಡದೊಡ್ಡ ಮನೆಗಳು.

೨:— ಬಿಡಪ್ಪ, ನಿನಗೇನು ಕಡಿಮೆ?

೧:— ಅದೇಕೆ ಹಾಗೆನ್ನುತ್ತೀ?

೨:— ನಿನ್ನ ಭೇರಿಯ ಶಬ್ದವನ್ನು ಕೇಳಿದೊಡನೆ ಎಲ್ಲರೂ ಮನೆಗಳನ್ನು ಹಾಗೆಹಾಗೆಯೇ ಬಿಟ್ಟು ಓಡಿಹೋಗುವರು. ಆಗ ಮನೆಯೊಳಗೆ ಹೊಕ್ಕು ಬೇಕಾದುದನ್ನು ಎತ್ತಿಕೊಂಡು ಬರಬಹುದು.

೧:— ಎತ್ತಿಕೊಂಡರೆ ನಾಳೆ ಸೆರೆಮನೆಗೆ ಹೋಗುವವರು?

೨:— ತಳಾರರು ಕಂಡರಲ್ಲವೇ? ಅವರೆಲ್ಲಿ ನೋಡುತ್ತಾರೆ–ಇಂಥಾ ಸಂ

ಭ್ರಮದಲ್ಲಿ? ಹಾಗೆ ಒಂದುವೇಳೆ ನೋಡಿದರೆ ಅವರಿಗೂ ಒಂದು ಪಾಲು ಕೊಟ್ಟರೆ ಸುಮ್ಮನಾಗುವರು.

೧:— ಇದೆಲ್ಲಾ ಪೂರ್ವಕಾಲದ ಮಾತು. ಈಗ ಹಾಗೆಲ್ಲಾ ಮಾಡುವುದಕ್ಕಾಗುವುದಿಲ್ಲ. ತಿಳಿಯಿತೇ? ನಮ್ಮನ್ನು ನಂಬಿ ಬಿಟ್ಟುಹೋಗಿರುವರು. ತಳಾರರೆಲ್ಲರೂ ನಂದನವನದಲ್ಲಿರಬೇಕೆಂದು ಅರಸಿನವರ ಅಪ್ಪಣೆಯಾಗಿದೆ.

೨:— ಹಾಗಾದರೆ ಇನ್ನೂ ಮೇಲಲ್ಲವೇ! ಅದೇನದು? (೧ನೆಯ ಭೇರಿಯವನ ಸೊಂಟಕ್ಕೆ ಕೈಹಾಕುವನು. ಕೆಲವು ಒಡವೆಗಳು ಕೆಳಗೆ ಬೀಳುವುವು.)

೧:— (ತೆರೆಯ ಕಡೆ ನೋಡಿ) ತಳಾರರು ಬರುತ್ತಿರುವರು. ಸುಮ್ಮನೆ ಭೇರಿ ಹೊಡಿ.

(೨ನೆಯವನು ಭೇರಿ ಹೊಡೆಯುವನು. ತಳವಾರರು ಸುಮ್ಮನೆ ಹೋಗುವರು. ೨ನೆಯವನು ಅವರಲ್ಲಿ ಒಬ್ಬನ ಕಿವಿಯ ಹತ್ತಿರ ಭೇರಿಯನ್ನು ಹೊಡೆಯಲು ಅವನು ನಿಲ್ಲುವನು. ಅವನ ಕಿವಿಯಲ್ಲಿ ಏನೋ ಹೇಳಿ, ಬಳಿಕ ಮೂವರೂ ಆಭರಣಗಳನ್ನು ಹಂಚಿಕೊಳ್ಳುತ್ತಿರುವರು.)

(ಅಷ್ಟರಲ್ಲಿ ಮೂವರು ವಿದ್ಯಾರ್ಥಿಗಳು ಬರುವರು.)

ವಿ. ೧:— ಭೇರಿಯ ಶಬ್ದವಾಯ್ತಲ್ಲ— ಎಲ್ಲಿ?

ವಿ. ೨:— ಇಲ್ಲಿಯೇ. (ಹಂಚಿಕೊಳ್ಳುತ್ತ ಕುಳಿತಿದ್ದ ಭೇರಿಯವರು ಮರೆಯಾಗಿದ್ದು ಶಬ್ದ ಮಾಡುವರು.)

ವಿ. ೧:— ಇದೆಲ್ಲಾ ನಮ್ಮ ಮಹಾರಾಜರಿಗೇಕಪ್ಪಾ?

ವಿ. ೨:— ಅವರ ವಿನೋದಕ್ಕೆ.

ವಿ. ೩:— ಇದರಿಂದ ಎಷ್ಟೊಂದು ಜನರು ಜೀವನಮಾಡುವರು? ನಿನಗೆ ಅರ್ಥಶಾಸ್ತ್ರದಲ್ಲಿ ಅರ್ಥವೂ ಬಾರದು.

ವಿ. ೧:— ಸರಿಯೇ, ಇಂಥ ಸಮಯಗಳಲ್ಲಿ ಮನೆಗಳ ಪಾಡೇನು? ಗ್ರಾಮರಕ್ಷಕರೆಲ್ಲಿ? ಊರಿನ ಗತಿಯೇನು? ಅನರ್ಥಶಾಸ್ತ್ರವಿದರೇ, ಅಪ್ಪಣೆ ಆಗಲಿ.

ವಿ. ೨:— ಇವರೇನು ಮಾಡುತ್ತಾರೋ?

ವಿ. ೩:— ಯಾರು?

ವಿ. ೨:— ಅದೋ ಅಲ್ಲಿ ನೋಡು. (ಎಂದು ಭೇರಿಯನ್ನು ಹೊಡೆಯುತ್ತಿದ್ದವರನ್ನು ತೋರಿಸುವನು.)

(ಮೂವರೂ ಮುಚ್ಚಿ ಆಭರಣಗಳನ್ನು ತಮ್ಮ ಸ್ವಾಧೀನಮಾಡಿಕೊಳ್ಳುವರು.)

ವಿ. ೧:— ನೋಡಿದೆಯೇನಯ್ಯ? ಅರ್ಥಶಾಸ್ತ್ರಸಂಗ್ರಹ!

ವಿ. ೨:— ನಾವು ಇಲ್ಲಿಗೆ ಬಾರದಿದ್ದರೆ ಇವರಿಗೆ ಲಾಭವಾಗುತ್ತಿದ್ದಿತು.

ವಿ. ೩:— ಈಗಲೂ ದೊಡ್ಡ ಮನೆಯಲ್ಲಿ ಬಿದ್ದೂಟದ ಲಾಭವಾಗುವುದು.

(ಮತ್ತೆ ಕೆಲವರು ವಿದ್ಯಾರ್ಥಿಗಳು ಬರುವರು)

ಮೊದಲಿನವರಲ್ಲಿ ೧ನೆಯ ವಿದ್ಯಾರ್ಥಿ:— (ಮತ್ತೆ ಬಂದವರನ್ನು ನೋಡಿ) ಮಿತ್ರರೇ, ನಿಮ್ಮಿಂದ ಒಂದು ಕೆಲಸವಾಗಬೇಕಾಗಿರುವುದು.

(೨) **ವಿ. ೧:**— ಅದಕ್ಕೇನು, ಅಗತ್ಯವಾಗಿ ಆಗಬಹುದು.

(೧) **ವಿ. ೧:**— ನಗರರಕ್ಷಣೆಗೆ ನಾವಲ್ಲದೆ ಈಗ ಮತ್ತಾರೂ ಕಾಣುವುದಿಲ್ಲ. ಸ್ವಯಂಬುದ್ಧ ಗುರುಗಳು ಭೇರಿಯ ಶಬ್ದಕ್ಕೆ ಮುಂಚೆ ನಮಗೆ ಮಾಡಿದ ಉಪದೇಶವನ್ನು ಸ್ಮರಿಸಿ ಈಗಿನ ಕರ್ತವ್ಯವನ್ನು ಮಾಡಬೇಕು.

(೨) **ವಿ. ೧:**— ಇಂಥಾ ವಿನೋದವನ್ನು ಬಿಟ್ಟು ಸುಡುಗಾಡಿನಲ್ಲಿ ಕಾವಲಿರಬೇಕಂತೆ! ಕ್ಷಮಿಸಬೇಕು—ಮಹಾಸ್ವಾಮಿ! (ಹೋಗುವನು)

(೨) **ವಿ. ೨:**— ನಮ್ಮಜ್ಜಿ ನಂದನವನಕ್ಕೆ ಹೋಗಲು ಒಂದು ಗಾಡಿಯನ್ನು ಮಾಡಿಕೊಂಡು ಬರಹೇಳಿದಳು. ನಾನಿಲ್ಲಿ ನಿಲ್ಲುವಂತಿಲ್ಲ. (ಹೋಗುವನು)

(೨) **ವಿ. ೩:**— ನನಗೆ ಈಗ ಮೈ ಚೆನ್ನಾಗಿಲ್ಲ; ಪಂಡಿತರು ನಂದನವನದಲ್ಲಿ ಇರಬಹುದು; ಇಲ್ಲದೆ ಇದ್ದರೂ ಬಾಧಕವಿಲ್ಲ, ಅಳಲೆಯ ಕಾಯನ್ನು ತರಬೇಕು. (ಹೋಗುವನು. ಉಳಿದ ವಿದ್ಯಾರ್ಥಿಗಳೂ ಹೋಗುವರು.)

(೧) **ವಿ. ೧:**— ನೋಡಿದಿರಾ, ಮಿತ್ರರೇ, ಇವರ ಭಕ್ತಿ ಎಂಥದೆಂಬುದು ತಿಳಿಯಿತೇ? ಇಂಥವರಿಂದಲ್ಲವೇ ನಮ್ಮ ದೇಶವು ಅಭಿವೃದ್ಧಿಯನ್ನು ಹೊಂದಬೇಕು?

ವಿ. ೨:— (ದಾರಿಯಲ್ಲಿ ಬರುತ್ತಿದ್ದ ಹೆಂಗಸರನ್ನು ನೋಡಿ) ಇದೋ ನೋಡು, ಈ ಕಡೆಯಲ್ಲಿ ಹೆಂಗಸರು ಬರುತ್ತಿರುವರು. ಇವರೂ ನಂದನವನಕ್ಕೆ ಹೋಗುವವರಾಗಿರಬಹುದು. (ಹೆಂಗಸರು ಬರುವರು)

ವಿದ್ಯಾರ್ಥಿಗಳು ಮೂವರೂ:— ತಾಯಿಯರೇ! ನೀವೂ ನಂದನವನಕ್ಕೆ ಹೋಗುವವರೇನು?

ಹೆಂಗಸರು:— ಇಲ್ಲ, ನಾವು ನಗರಸಂರಕ್ಷಣೆಗಾಗಿ ಹೊರಟಿರುವೆವು. ನೀವಾರು?

ವಿದ್ಯಾರ್ಥಿಗಳು:— ನಾವು ಸ್ವಯಂಬುದ್ಧಗುರುಗಳ ಶಿಷ್ಯರು.

ಹೆಂಗಸರು:— ತಿಳಿಯಿತು ಗುರುವಚನವನ್ನು ಪರಿಪಾಲಿಸಿ. ನಿಮಗೆ ಮಂಗಳವಾಗಲಿ. (ಹೋಗುವರು)

ವಿದ್ಯಾರ್ಥಿ ೧:— ನಗರಸಂರಕ್ಷಣೆಯಲ್ಲಿ ನಾವು ಜಾಗರೂಕರಾಗಿರಬೇಕು, ಬನ್ನಿರಿ. (ಮೂವರೂ ಹೋಗುವರು)

ಗರ್ಭಾಂಕ ೩.

ನಂದನವನ— ಕೊಳದ ಹತ್ತಿರ.

(ಉಪರಿಚಿತಮಹಾರಾಜನೂ ಪಟ್ಟದರಸಿಯರು ನಾಲ್ವರೂ ಬರುವರು)

ಪದ್ಮಾವತಿ:— ಆರ್ಯಪುತ್ರನೆ! ಪ್ರಜಾಪರಿಪಾಲನದಲ್ಲಿಡಬೇಕಾದ ಆ ಸಕ್ತಿಯನ್ನೂ ಬುದ್ಧಿಕೌಶಲವನ್ನೂ ವನವಿಹಾರದಲ್ಲಿ ವಿನಿಯೋಗಿಸುವುದರಿಂದ ಪ್ರಯೋಜನವೇನು?

ರಾಜ: (ನಕ್ಕು)

|| ಕಂದ || ಪ್ರಜೆಯಂ ಪಾಲಿಸೆ ದೈವಂ
ಸೃಜಿಯಿಸಲಿಲ್ಲಂ ನರೇಂದ್ರನಂ ನಿಜಸುಖಮಂ
ತ್ಯಜಿಸಿದ ನರಪತಿಗಪ್ಪುದು
ನಿಜದಿಂದಂ ನರಕಪತನ ಮಂಬುಜನಯನೇ || ೬ ||

ಪದ್ಮಾವತಿ:— ಓನಾಮವನ್ನು ಕಲಿಯುತ್ತಿರುವ ಹುಡುಗರೂ ರಾಜನೀತಿಯನ್ನು ತಿಳಿದಿರುವರು; ವ್ಯವಹಾರವನ್ನು ಬಲ್ಲರು; ಪ್ರಜೆಗಳ ಕರ್ತವ್ಯವನ್ನು ತಿಳಿದಿರುವರು; ದೇಶಸೇವೆಗೂ ರಾಜಸೇವೆಗೂ ಬದ್ಧಕಂಕಣರಾಗಿರುವರು. ಹೀಗಿರುವಲ್ಲಿ ತೃಣವಲ್ಲಘುವಾದ ಸ್ತ್ರೈಣಸುಖವನ್ನೇ ಪರಮಸುಖವೆಂದು ಭಾವಿಸಿ ಆರ್ಯಪುತ್ರನು ರಾಜನಾಮಧಾರಕನಂತೆ ಹೀಗೆ ವರ್ತಿಸುವುದು ಕುರುರಾಜಾಂಗಣದ ಚಕ್ರವರ್ತಿಗೆ ತಕ್ಕುದಲ್ಲ.

ರಾಜ:— ಸ್ವಯಂಬುದ್ಧದೇವನ ಸದುಪದೇಶವೂ ರಾಜಧರ್ಮವೂ ನಿನಗೆ ಪೂರ್ಣಪಾಂಡಿತ್ಯವನ್ನುಂಟುಮಾಡಿರುವುವೆಂದು ಬಲ್ಲೆನು. ನೀವೇನೆನ್ನುವಿರಿ? (ಮಿಕ್ಕ ರಾಣಿಯರನ್ನು ನೋಡುವನು)

ಪ್ರಭಾವತಿ:—

|| ಕಂದ || ಪತಿಪೇಳ್ದಂತುಟೆ ಮಾಳ್ಪುದು
ಸತಿಗೆ ಹಿತಂ ಧರ್ಮಚಿಂತೆ ಪೆರತೇಕೆಮಗೀ ।
ಕ್ಷಿತಿಪನ ಮಾತಂ ಮೀರದೊ
ಡತಿಶಯ ಪುಣ್ಯಕ್ಕೆ ನಾವೆ ಭಾಗಿಗಳಪ್ಪೆಂ || ೭ ||

ಸುಪ್ರಭೆ: — ನನ್ನ ಅಭಿಪ್ರಾಯವೂ —

|| ಕಂದ || ಅರಸಂ ನಮಗೊಡೆಯಂ ಪತಿ
ಪರದೈವಂ ನಿಜ್ಜಮಾತನಾಣತಿಯೆಂತಂ
ತಿರೆ ಪರಮಾರ್ಥಂ ಸತಿಗೆಂ
ದೊರೆವರ್ ಸ್ತ್ರೀಧರ್ಮ ನೀತಿಯಂ ನೆರೆಬಲ್ಲರ್ || ೮ ||

ಅಮಿತಮತಿ: — ಆರ್ಯಪುತ್ರನೇ! ಲಾಲಿಸಬೇಕು.

|| ಕಂದ || ಪತಿಹಿತಕಾರ್ಯಂಗಳೊಳಾ
ಯತಿಯಿಂ ಕರಣೇಷು ಮಂತ್ರಿಯೆಂದಿಪ್ಪುದರಿಂ
ಸತಿಯಂತಿರ್ಪುದು ಪದ್ಮಾ
ವತಿದೇವಿಯುರೆಂದ ನುಡಿಗಮಿನ್ನೆರಡುಂಟೇ? || ೯ ||

ರಾಜ: — ಸಾಕು ಸಾಕು, ನಿಮ್ಮ ಧರ್ಮೋಪದೇಶವು. ದೇಶವೆಲ್ಲವೂ ಈ ಸ್ವಯಂಬುದ್ಧದೇವನ ಉಪದೇಶದಿಂದ ಕೆಟ್ಟುಹೋಗಿರುವುದು. ಎಲ್ಲಿ ನೋಡಿದರೂ ಧರ್ಮೋಪದೇಶ, ರಾಜಭಕ್ತಿ, ದೇಶಸೇವೆ, ಗುರುಭಕ್ತಿ ಇವುಗಳೇ! ನಿಮಗೆ ಈ ಉಪದೇಶಗಳಿಂದ ತಲೆಗೆ ಪಿತ್ಥವು ಅಧಿಕವಾಗಿದೆ. ಮನುಷ್ಯನ ಜೀವಿತ ಕಾಲವು ಅಲ್ಪವೆಂದು ತಿಳಿದೂ ನೀವು ಹೀಗೆ ಸನ್ಯಾಸಿನಿಯರಂತೆ ವರ್ತಿಸುವುದು ತಕ್ಕುದಲ್ಲ. ಏಕೆಂದರೆ, —

|| ಕಂದ || ನಾಳೆಯೊ ಈಗಳೊ ಮಾಣದೆ
ಕಾಳನ ತುತ್ತಾಗಿಯಕಟ ಪೋಪುದು ಜೀವಂ
ವೇಳೆಗೆ ಬಂದೊದವಿದ್ದಾ
ಲೀಲೆಯನನುಭವಿಸಲರಿದೊಡಾತನೆ ಚದುರಂ || ೧೦ ||

ಆದುದರಿಂದ ಇನ್ನು ಮರು ಮಾತಾಡದೆ ನಡೆಯಿರಿ, ಜಲಕೇಳಿಗೆ!

(ಮಹಿಷಿಯರು ವಿಧೇಯರಾಗಿ ರಾಜನೊಡನೆ ಹೊರಡುವರು. ರಾಜನು ಪತ್ನಿಯರೊಡನೆ ಬಂದು ಕೊಳದಲ್ಲಿ ಜಲಕ್ರೀಡೆಯನ್ನು ಸಲ್ಲಿಸುತ್ತಿರುವನು)

(ಬಳಿಕ, ಅಲ್ಲಿಗೆ ಭೌಮವಿಹಾರಾರ್ಥವಾಗಿ ವಜ್ರದಾಡನೂ ಮದನವೇಗೆಯೂ ಬರುವರು)

ಮದನವೇಗೆ:— ಭೌಮವಿಹಾರಕ್ಕೆಂದು ಅಳಕಪುರಿಯಿಂದ ಎಲ್ಲಿಗೆ ಕರೆ ತಂದೆ? ಇದಾವ ದೇಶ? ಇಲ್ಲಿಗರಸನಾರು? ಹೇಳು.

ವಜ್ರದಾಡ:—

|| ಕಂದ || ಇದು ಕುರುರಾಜಾಂಗಣ ವಿಷ
ಯದೆ ಕೇಳ್ ಶ್ರಾವಸ್ತಿವೆಸರ ಪುರದುಪವನಮಿಂ
ತಿದ ನಾಳ್ವನುಪರಿಚಿತ ನಾ
ಮದರಾಯಂ, ಪಂಚಶತಸತೀಸುತಗೊಡೆಯಂ||೧೧||

(ಕಿವಿಗೊಟ್ಟು ಕೇಳಿ ಆಶ್ಚರ್ಯದಿಂದ)

ಏನಿದು, ವಿಪಂಚೀನಾದವೆಲ್ಲಿಂದ ಬಂದುದು? (ಸುತ್ತಲೂ ನೋಡುವನು)

ಮದನವೇಗೆ:— (ನೋಡಿಬಂದು) ನೀನು ಹೇಳಿದ ರಾಯನು ಇಲ್ಲಿ ತನ್ನರಸಿಯರೊಡನೆ ಜಲಕೇಳಿಯನ್ನು ಸಲ್ಲಿಸುತ್ತಿರುವನು. ಆದುದರಿಂದ—

|| ಕಂದ | ಜಲಧಾರೆಗೆ ಮೆಯ್ಯಂ ಕೋ
ಮಲೆ ಮರೆಯಿಸಲಿತ್ತಿ ಬಾಹುದಂಡದಿ ನಿಮಿರ್ದೇಂ
ಸಲೆ ಮಣಿಕಂಕಣಝುಂಕೃತ
ದುಲಿಸಿಂ ಗೆಲಲಾರ್ತಳೋ ವಿಪಂಚೀಸ್ವನಮಂ || ೧೨ ||

ಇನ್ನೂ ಇಲ್ಲಿ ನೋಡು.

|| ಕಂದ || ಮಳಯಜ ಜಲಮಂ ಸಿಂಪಿಸ
ಲಿಳೇಶನೀಕೆಗಳ ಮೇಲೆ ಮುತ್ತಿದ ಧಾರಾ
ವಳಿಯಂಬುಜಮಂ ಮುತ್ತಿ
ರ್ದ್ದಳಿಕುಳಮಂ ಪೋಲ್ತು ಕರಮೆ ರಂಜಿಸುತಿರ್ಕ್ಕುಂ ||೧೩||

(ನೋಡುತ ಆಶ್ಚರ್ಯದಿಂದ ಬೆರಗಾಗಿ)

|| ಕಂದ | ಈ ವನನಿನಾಕೊಳನೀ ಜಲ
ನಿನಾ ವೈಭವವಿನಾ ವಿಳಾಸಮಿನಾ ಸಂಪದಮಿ
ನ್ನಾ ವಿಳೆಯೊಳಗುಂಟೆಮ್ಮಳ
ಕಾವತಿಯೊಳಮಿಲ್ಲಮಿಲ್ಲಮಿನಿತ್ತೈಶ್ವರ್ಯಂ | ೧೪ ||

ವಜ್ರದಾಡ:— (ನೋಡಿ ಅಸೂಯೆಯಿಂದ)

|| ಕಂದ | ಎನಿತೆನಿತು ವಿಭವಮಿನಾತಂ
ಗನಿತನಿತುಂ ದುಃಖಹೇತುವೆಂದರಿಯದೆ ಮೂ
ರ್ಖನವೋಲ್ ತಿರಿತಂದಪನೀ
ಜನಪಂ ಖೇಚರರ ಮಹಿಮೆ ಭೂಚರಗುಂಟೇ | ೧೫ ||

ಮದನವೇಗೆ:— ನಿಜ; ಮನೆಯಿಲ್ಲದೆ, ನೆಲೆಯಿಲ್ಲದೆ, ಪಕ್ಷಿಗಳಂತೆ ಅಂತರಿಕ್ಷದಲ್ಲಿ ಎಂದೂ ಸಂಚರಿಸುತ್ತಿರುವ "ಖೇಚರರ ಮಹಿಮೆ ಭೂಚರರ್ಗುಂಟೇ?"

ವಜ್ರದಾಡ:— (ದರ್ಪದಿಂದ)

|| ಕಂದ || ಇವನೀ ವೈಭವಮನಿತಂ
ತವೆಕೆಡಿಸುವೆನೀಗಳಿನ್ನ ವಿದ್ಯಾ ಬಲಮಂ
ದವೆಕೆಮ್ಮನೆನೀಂ ಪೊಗಳದಿ
ರಿವನಂ ಖೇಚರರಮಹಿಮೆ ಭೂಚರರ್ಗುಂಟೇ || ೧೬ |

ಮದನವೇಗೆ:— (ಅಪಹಾಸ್ಯದಿಂದ.)

|| ಕಂದ || ಪೆರರ್ಗಪಕೃತಿಯಂ ಮಾಡದೆ
ಕರುಂಬಿ ಪೊಲ್ಲಮೆಯನೆಸಗಿ ವಿದ್ಯಾಬಲದಿಂ
ಮೆರೆವೆಮ್ಮಂತಿರೆ ವಿದ್ಯೆಯ
ನರಿಯದ ಭೂಚರರದೆಂತು ನಮಗೀಡಪ್ಪರ್ || ೧೭ ||

ವಜ್ರದಾಡ: (ಅಸಹನೆಯಿಂದ)

|| ಕಂದ || ಎನಿತಂ ಪೇಳ್ದೊಡಮಿನಾಮನು
ಜನವಿಭವಂ ನಿನಗೆ ಪಿರಿದು ಮತಿಶಯಮಾಯ್ತಿಂ

ದಿನ ಭೌಮವಿಹಾರಂ ಸಾ
ಕೆನಗಂ ಮಾಳ್ಪುಜ್ಜುಗಂಗಳೊಳವೆನಿತಾನುಂ ॥ ೧೮ ॥

ಮದನವೇಗೆ: — (ಹೊರಡಲಿಷ್ಟವಿಲ್ಲದೆ ತಡಮಾಡುವಳು)

ವಜ್ರದಾಡ: — (ಕೋಪದಿಂದ)

॥ ಕಂದ ॥ ನಡನಡೆ ಕೊಂಡಾಡದೆ ನೆಲ
ದೊಡೆಯನ ನೀನಿರ್ದೊಡಿಲ್ಲಿ ಪೊಡೆವಟ್ಟವನಂ
ಬಿಡದೋಲಯಿಸಲ್ ನೆರೆವೈ
ತಡೆಯದೆ ನಡೆಧೂರ್ತೆ ನಿಲ್ಲದೀಗಡೆ ಪೋಪಂ ॥ ೧೯ ॥

(ಬಲಾತ್ಕಾರದಿಂದ ಮದನವೇಗೆಯನ್ನು ಓಡಿಸಿಕೊಂಡು ಹೋಗಿ ಸ್ವಲ್ಪಹೊತ್ತಿನೊಳಗಾಗಿ ಒಬ್ಬನೇ ಬಂದು ಕೊಳದ ಕಡೆಗೆ ನೋಡಿ) —

॥ ಕಂದ ॥ ಇನಿವಿರಿದುವಿಭವದಿಂದೀ
ಜನಪಂ ನೀರಾಡುತಿರ್ಪ್ಪನಂ ಕಂಡೆನಗಂ
ಮನದೊಳಗೊಗೆಗುಂ ಬಯಕೆಗ
ಳೆನಿತಾನುಂ ತೀರ್ಚಲೀನನಾನೆಂತಿವನಂ ॥ ೨೦ ॥

(ಸ್ವಲ್ಪಹೊತ್ತು ಆಲೋಚಿಸುತ್ತಿದ್ದ ಬಳಿಕ)

ಇರಲಿ, ಅಲ್ಲಿ ಕಾಣುವ ದೊಡ್ಡ ಶಿಲೆಯನ್ನೆತ್ತಿಕೊಂಡು ಬಂದು ಕೊಳದಲ್ಲಿ ಹಾಕಿ ಪತ್ನಿಯರೊಡನೆ ಈ ರಾಜನೂ ಮಡಿವಂತೆ ಮಾಡುವೆನು. (ಹೋಗುವನು)

(ತೆರೆ ಬೀಳುವುದು)

(ಮತ್ತೆ ತೆರೆಯಲ್ಲಿ)

॥ ಕಂದ ॥ ಪೊಂದುವ ಪುಟ್ಟುವರಾಟಳ
ದಂದದ ಸಂಸಾರದಲ್ಲಿ ನವೆಯದೆ ಪರಮಾ
ನಂದವನೊಂದಲ್ ನೆನೆವುದು
ಸುಂದರಿ ನೀಂ ಬಿಡದೆ ಜಿನಪದಾಬ್ಜವನೀಗಳ್ ॥ ೨೧ ॥

ಗತಿ ನಾಲ್ಕರೊಳಂ ತಪ್ಪದು
ವೃತಿ ಜೀವಿಗೆ ಶುದ್ಧಮನದಿನರ್ಹತ್ಪದಮಂ
ಸತತಂ ಧ್ಯಾನಿಸೆ ಪಂಚಮ
ಗತಿ ದೊರೆಗುಂ ನಮಗೆ ನಿಜದಿನಬ್ಜದಳಾಕ್ಷೀ ॥ ೨೦ ॥

ಮೊದಲನೆಯ ಅಂಕವು ಮುಗಿದುದು.

ಶ್ರೀಃ

ದ್ವಿತೀಯಾಂಕ.

ಗರ್ಭಾಂಕ ೧.

ತಪೋವನ — ಋಷ್ಯಾಶ್ರಮ.

(ಸಾರಸ್ವತ ಭಟ್ಟಾರಕರು ಶಿಷ್ಯವೃಂದಕ್ಕೆ ಧರ್ಮೋಪದೇಶವನ್ನು ಮಾಡುತ್ತಿರುವನು)

ಭಟ್ಟಾರಕ: — ಭವ್ಯೋತ್ತಮರೇ! ಗೃಹಸ್ಥಾಶ್ರಮದಲ್ಲಿ ವ್ರತಗಳು ಹನ್ನೆರಡಿರುವುವು. ಅವಾವುವೆಂದರೆ: — ಅಣುವ್ರತಗಳೈದು, ಗುಣವ್ರತಗಳು ಮೂರು, ಶಿಕ್ಷಾವ್ರತಗಳು ನಾಲ್ಕು. ಇವುಗಳಲ್ಲಿ ಮೊದಲಲ್ಲಿ ಪಂಚಾಣುವ್ರತಗಳಾವುವು — ವಿಚಾರಿಸಿ ನೋಡಬೇಕು. ಶಾಸ್ತ್ರಜ್ಞರು ಹೀಗೆಂದು ಹೇಳಿರುವರು: —

ಪಾಣಾ ಇವಾಯ ವಿರಈ ಸಚ್ಚಮದತ್ತಸ್ಸವಜ್ಜಣಂ
ಚೇವ
ಥೂಳಯಡವಂಭಚೇರಂ ಇಚ್ಛಾ ಏ ಗಂಥಪರಿಮಾಣಂ ॥

ಪ್ರಾಣಾತಿಪಾತವಿರತಿ: — ಪ್ರಾಣಿಹಿಂಸೆಯನ್ನು ಮಾಡದೆ ಇರುವುದು; **ಸಚ್ಚಂ** — ಸತ್ಯವನ್ನಾಡುವುದು, **ಅದತ್ತಸ್ಸವಜ್ಜಣಂ** — ಕೊಡದೆ ಇರುವುದನ್ನು

ಮುಟ್ಟದಿರುವುದು — ಎಂದರೆ ಕದಿಯದೆ ಇರುವುದು; **ಥೂಳಯಡವಂಭಚೇರಂ** — ಸ್ಥೂಳವಾಗಿ ಬ್ರಹ್ಮಚರ್ಯವನ್ನು ಕಾಪಾಡುವುದು; **ಇಚ್ಛಾಏಗಂಥ ಪರಿಮಾಣಂ** — ಪರಿಗ್ರಹ, ಪರಿವಾರ, ಪರಿಜನ ಮೊದಲಾದುವುಗಳಲ್ಲಿ ಇಚ್ಛೆಯಂತೆ ಪರಿಮಿತಿಯನ್ನು ಇಟ್ಟುಕೊಳ್ಳುವುದು. ಎಂದರೆ ಮಿತಿಮೀರದೆ ಇರುವುದು. ಇವೇ ಪಂಚಾಣುವ್ರತಗಳು. ಇವುಗಳ ಹೆಸರುಗಳನ್ನು ಸೂಕ್ಷ್ಮವಾಗಿ ಹೇಳಿಯಾಯ್ತು. ಇನ್ನು ಅವುಗಳನ್ನು ವಿಚಾರಮಾಡಿ ತಿಳಿದುಕೊಳ್ಳಬೇಕಾದುದು ಅಗತ್ಯ. ಶಾಸ್ತ್ರಕಾರರು ಅದರ ವಿಷಯದಲ್ಲಿ ಹೀಗೆನ್ನುವರು:—

ಜೇ ತಸಕಾಯಾ ಜೀವಾ ಪುವ್ವುದ್ದಿಠಾಣ ಹಿಂಸಿಯವ್ವಾತೇ
ಏ ಇಂದಿಯಾ ವಿಣಿಕ್ಕಾರಣೇಣ ಪಥಮಂ ವಯಂಥೂಳಂ ||

ಪೂರ್ವದಲ್ಲಿ ನಿಮಗೆ ಹೇಳಿದಂಥ ತ್ರಸಕಾಯದ ಜೀವಗಳನ್ನು ಹಿಂಸೆಮಾಡತಕ್ಕುದಲ್ಲ. ಎಂದರೆ ದ್ವೀಂದ್ರಿಯಾ-ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ಜೀವಗಳನ್ನು ಹಿಂಸೆಮಾಡಬಾರದು. ಏಕೇಂದ್ರಿಯಜೀವಗಳನ್ನಾಗಲಿ ನಿಷ್ಕಾರಣವಾಗಿ ಹಿಂಸೆಮಾಡಬಾರದು. ಏಕೇಂದ್ರಿಯಗಳೆಂದರೆ **ಸಸ್ಯಾದಿಗಳು.** ಏಕೇಂದ್ರಿಯಗಳನ್ನು ಹಿಂಸೆಮಾಡುವುದಕ್ಕೆ ಕಾರಣವು ಸರಿಯಾದುದು ಇಲ್ಲದಿದ್ದರೆ ಅಂಥ ಹಿಂಸೆಯಿಂದ ವ್ರತಭಂಗವಾಗುವುದು. ಎಂದರೆ ನಮಗೆ ಆಹಾರಕ್ಕೆ ಬೇಕಾಗಿರುವ ಸಸ್ಯಾದಿಗಳ ಫಲಗಳನ್ನು ನಾವು ಸಕಾಲದಲ್ಲಿ ಗ್ರಹಿಸಬಹುದು. ಎಂದಹಾಗಾಯ್ತು. ತ್ರಸಕಾಯದ ಜೀವಗಳನ್ನು ಹಾಗೆಯೇ ನಮಗೆ ಉಪಯೋಗವಾಗತಕ್ಕುದೆಂದು ಏಕೆ ನಾವು ಹಿಂಸಿಸಿ ತಿನ್ನಬಾರದು? — ಎಂದು ಕೇಳುವಿರೊ? ಅದಕ್ಕೆ ಶಾಸ್ತ್ರಕಾರರು ಹೇಳಿರುವುದೇನೆಂದರೆ, —

|| ಕಂದ || ದೇವತೆಗಂ ಮಂತ್ರದ ಸಿ
ದ್ಧಾಪ್ತಿಗ ಮೌಷಧಕ್ಕ ಮಾತ್ಮಾರ್ಥಕ್ಕಂ
ಜೀವಿಗಳಂ ಹಿಂಸಿಸದಿ
ರ್ದ್ದೇವಗೆಯೊಳ ಮಿರಲಣುವ್ರತದೆ ಮೊದಲಕ್ಕುಂ ||

ಶಿಷ್ಯರು: — ಗುರುಮಹಾರಾಜ! ಇದನ್ನು ಸುಲಭರೀತಿಯಿಂದ ಬಿಡಿಸಿ ಹೇಳಬೇಕು.

ಸಾರಸ್ವತಭಟ್ಟಾರಕ:— ಈಗ, ಒಂದು ದೇವತೆಯನ್ನು ವಶಮಾಡಿಕೊಳ್ಳುವುದಕ್ಕೆಂದಾಗಲಿ, ದೇವತಾ ಪ್ರಸನ್ನವಾಗಬೇಕೆಂದಾಗಲಿ,—ಕೋಳಿ, ಕೋಣ, ತಗರು ಮೊದಲಾದುವನ್ನು ಬಲಿಕೊಡುವುದು ಜೈನಶಾಸ್ತ್ರಕ್ಕೆ ವಿರುದ್ಧವಾದ ವಿಚಾರವೆಂದಾಯ್ತು. ಹಾಗಾದರೆ ಅಂಥ ಬಲಿಯನ್ನು ನಾವೇ ಕೊಡದೆ ಮತ್ತೊಬ್ಬರ ಕೈಯಿಂದ ಕೊಡಿಸಿದರೆ ನಮಗೆ ಅದರ ದೋಷವಿಲ್ಲವೆಂದು ಕೆಲವರು ತಿಳಿಯಬಹುದು— ಇದು ತಪ್ಪು. ಪಾಪಕೃತ್ಯವಿಂತಹುದೆಂದು ತಿಳಿದ ಜ್ಞಾನಿಯಾದವನು ಅಂಥ ಪಾಪಕೃತ್ಯಕ್ಕೆ ಉತ್ತೇಜನವನ್ನಾವವಿಧದಿಂದ ಕೊಟ್ಟರೂ ಅವನು ಕ್ರೂರಕರ್ಮಿಯಾಗುವನು. ಅದ್ದರಿಂದ ದೇವತಾಪ್ರೀತಿಯಾಗುವುದೆಂದು ಭಾವಿಸಿ ಜೀವಹಿಂಸೆಯನ್ನು ಮಾಡಲಾಗದು. "ಮಂತ್ರದ ಸಿದ್ಧ್ಯವಾಪ್ತಿಗಂ" ಎಂದು ಶಾಸ್ತ್ರಕಾರರು ಹೇಳಿರುವುದರಿಂದ, ಕೆಲವರು ಈ ಮಂತ್ರಕ್ಕಿಷ್ಟು ಕೋಳಿ, ಈ ಮಂತ್ರಕ್ಕಿಷ್ಟು ಆಡು, ಈ ಮಂತ್ರಕ್ಕಿಷ್ಟು ಕೋಣವೆಂದು ಬಲಿಯನ್ನು ಕೊಟ್ಟು ಮಂತ್ರವನ್ನು ಸಾಧಿಸುವೆವು. ಎಂದರೆ ಜ್ಞಾನಿಗಳಾದವರು ಅಂಥಕೊಲೆಗೆ ಅವಕಾಶವನ್ನು ಕೊಡಬಾರದು. ಔಷಧಕ್ಕೆ ಎಂಬಲ್ಲಿ ಇಂಥ ರಕ್ತವಾದರೆ ಇವನಿಗೆ ಮೈಚೆನ್ನಾಗುವುದು; ಎಂದು ಮುಂತಾಗಿ ಕೆಲವರು ಔಷಧಗಳನ್ನು ಹೇಳುವರು. ಅಂಥ ಔಷಧಗಳನ್ನು ನಾವು ತೆಗೆದುಕೊಳ್ಳುವುದು ಯುಕ್ತವಲ್ಲ. "ಆತ್ಮಾರ್ಥಕ್ಕಂ" ಎಂದಿರುವುದರಿಂದ ಸ್ವಕಾರ್ಯವಾವುದಕ್ಕಾದರೂ ಸರಿ ಜೀವಹಿಂಸೆಯನ್ನು ಮಾಡಬೇಡವೆಂದು ಸ್ವಾಮಿಗಳು ಹೇಳಿರುವರು. ಇನ್ನಾವ ಉಪಾಯದಿಂದಾದರೂ ಜೀವಹಿಂಸೆಯನ್ನು ಮಾಡಬಹುದೆಂದು ನಿಮಗೆ ತೋರಿದ ಪಕ್ಷದಲ್ಲಿ 'ಏಱಗೆಯೊಳಂ' ಎಂದು ಶಾಸ್ತ್ರಕಾರರು ಹೇಳಿರುವ ಮಾತನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟು ಆಕ್ಷೇಪಣೆಗೆ ಸಮಾಧಾನವನ್ನು ತಿಳಿಯಿರಿ. (ಶ್ಲೋಕವನ್ನು ಮತ್ತೆ ಹೇಳಿ)

ಇದು ಅಹಿಂಸಾವ್ರತ, ಇನ್ನು ಅಹಿಂಸಾವ್ರತಕ್ಕೆ ಅತಿಚಾರಂಗಳನ್ನೂ ಹೇಳುವೆನು:—

|| ಕಂದ || ಜಿನಸಮಯದೆ ಛೇದನ ಬಂ
ಧನಪೀಡನ ಮಧಿಕಭಾರದಾರೋಪಣ ಮಂ
ತಿನಿತನ್ನ ಪಾನದ ನಿರೋ
ಧನಮಿವಹಿಂಸಾವ್ರತಕ್ಕನತಿಚಾರಂಗಳ್ ||

ಇನ್ನು ಉಳಿದ ನಾಲ್ಕು ಅಣುವ್ರತಗಳಿಗೆ ಸೂತ್ರಕಾರರು ಹೇಳಿರುವುದೇನೆಂದರೆ, [ಆ ಸಮಯಕ್ಕೆ ಪೂಜಾ ದ್ರವ್ಯಗಳೊಡನೆ ಅನಂತವೀರ್ಯನು ಬಂದು ತ್ರಿಃಪ್ರದಕ್ಷಿಣೆಯನ್ನು ಮಾಡಿ ನಮಸ್ಕರಿಸಿ ಪೂಜಿಸಿ ಉಚಿತಾಸನದಲ್ಲಿ ಕುಳಿತು ಧರ್ಮವನ್ನು ಕೇಳುತ್ತಿರುವನು.]

ಭಟ್ಟಾರಕ: — ಇನ್ನು ಉಳಿದ ನಾಲ್ಕು ಅಣುವ್ರತಗಳಿಗೆ ಸೂತ್ರಕಾರನು ಹೇಳುವುದನ್ನು ಕೇಳಿರಿ. —

ಅಳಿಯಂ ಣ ಜಂಪಣೀಯಂ ಪಾಣಿವಹಕರಂತು ಸಚ್ಚವಯಣಂ ವಿ
ರಾಯೇಣ ಯ ದೋಸೇಣ ಯಣೇಯಂ ಬಿದಿಯಂವಯಂ ಥೂಳಂ ||
ಪುರಗಾಮು ಪಟ್ಟಣಾ ಇಸುಪಡಿಯಂ ಣತ್ಥಂಚ ಣಿಹಿಯವೀಸರಿಯಂ
ಪರದವ್ವಮಘಿಣ್ಣಂ ತಸ್ಸ ಹೋಯ ಥೂಳವಯಂ ತಿದಿಯಂ ||
ಪವ್ವೇಸು ಇತ್ಥಿಸೇವಾ ಅಣಂಗಕೀಡಾ ಸಯಾ ವಿವಜ್ಜಂತೋ
ಥೂಳಯಡ ವಂಭಯಾರೀ ಜಿಣೇಹಿ ಭಣಿಯೋ ಪವಯಣಮ್ಮಿ ||
ಜಂ ಪರಿಮಾಣಂ ಕೀರಇ ಧಣಧಾಣ್ಣ ಹಿರಣ್ಣ ಕಂಚಣಾ ಈಣಂ
ತಂ ಜಾಣ ಪಂಚಮುವಯಂ ಣಿದ್ದಿಠ್ಠಮುವಾಸಯಜ್ಝಯಣೇ ||

ಇದನ್ನೇ ಶಾಸ್ತ್ರಕಾರರು ಮತ್ತೊಂದು ವಿಧವಾಗಿ ಹೇಳಿರುವರು.

|| ಕಂದ || ಬಗೆಯದೆ ಲೋಭ ದ್ವೇಷಾ
ದಿಗಳಂ ಬಗೆಯದೆ ಭಯಪ್ರಯೋಜನಮಂ ನೆ
ಟ್ಟಗೆ ಪುಸಿಯುಲ್ಕೆಂದುಂ ತಾಂ
ಬಗೆಗೊಳ್ಳದಣುವ್ರತಂ ದ್ವಿತೀಯಮೆನಿಕ್ಕುಂ || ೨೫ ||
ಪತಿತಮೊ ಕೆಡೆದಿರ್ದುದೊ ವಿ
ಸ್ಮೃತಮೋ ಮೇಣ್ ನಷ್ಟಮಾದುದೋ ವನಮಾರ್ಗಾ
ಗತಮಂ ಪರಸ್ವಮಂ ನೋ
ಡಿ, ತುಡುಕದೊಡಣುವ್ರತಂ ತೃತೀಯವೆನಿಕ್ಕುಂ || ೨೬ ||
ಪರವನಿತೆಯರಂ ತಾಯಂ

ತಿರೆಮೇಣ್ ಸುತೆಯಂತಿರೆಣಿಸಿ ನಿಜವನಿತೆಯೊಳಾ
ದರದಿಂದಂ ಸಂತೋಷಿಸು
ತಿರುತಿರ್ಪುದಣುವ್ರತಂ ಚತುರ್ಥಮೆನಿಕ್ಕುಂ || ೨೭ ||
ಪರಿಕಿಸುತುಂ ದಾಸೀದಾ
ಸರೊಳಂ ವಾಹನದೊಳಂತು ಪೊನ್ನೊಳಗಂ ಸ್ತ್ರೀ
ಯರೊಳಂ ಪರಿಮಿತಿಯಿಂ ಶೇ
ಖರಿಪುದಣುವ್ರತದೆ ಪಂಚಮವ್ರತಮಕ್ಕುಂ || ೨೮ ||

(ಉಪದೇಶವಾದಮೇಲೆ ಧರ್ಮವೃದ್ಧಿಧ್ವನಿಯಾಗುವುದು. ಸಾರಸ್ವತ ಭಟ್ಟಾರಕರು ಅನಂತವೀರ್ಯ ಕುಮಾರನನ್ನು ಕರುಣೆಯಿಂದ ಅವಲೋಕಿಸುವರು)

ಅನಂತವೀರ್ಯ:— (ಎದ್ದು ಕೈಮುಗಿದು) ಭವಸಂಹಾರಕರಾದ ಮಹನೀಯರ ನಾಮಸ್ಮರಣೆಯಿಂದ ಭವ್ಯನಿಗೆ ಭವಸಾಗರವನ್ನು ದಾಂಟುವ ಶಕ್ತಿಯುಂಟಾಗುವಲ್ಲಿ ತಮ್ಮಂಥ ಪೂಜ್ಯರ ಸಂದರ್ಶನವೂ ಸೇವೆಯೂ ಧರ್ಮೋಪದೇಶವೂ ಲಭಿಸಿದ ನನಗೆ ಇಂದ್ರಪದವಿಯೇ ದೊರೆತಂತಾಯ್ತು. ಪರಮ ದಯಾಳುಗಳಾದ ತಮ್ಮಂಥ ಗುರುಗಳಲ್ಲದೆ ಅಸ್ಮದಾದಿಗಳಿಗೆ ಸದ್ಗತಿಯನ್ನು ತೋರಿಸುವವರು ಮತ್ತಾರಿರುವರು? ಮುನಿವರ್ಯರೇ! ತಮಗೆ ತಿಳಿಯದೆ ಇರುವುದೊಂದೂ ಇಲ್ಲವಾದುದರಿಂದ ನಮ್ಮ ತಂದೆಯಾದ ಉಪರಿಚಿತ ಮಹಾರಾಜನಿಗೂ ತಾಯಿಯರಿಗೂ ಅಂಥ ಅಪಮೃತ್ಯುವಿಂದ ಬಾಧೆಯಾಗುವುದಕ್ಕೆ ಕಾರಣವೇನು? ಅನುಗ್ರಹಿಸಿ ಹೇಳಬೇಕು.

ಸಾ. ಭಟ್ಟಾರಕ:— (ಅವಧಿಲೋಚನದಿಂದರಿತು) ಎಲೈ, ಅನಂತವೀರ್ಯರಾಯನೇ! ವಜ್ರದಾಡನೆಂಬ ವಿದ್ಯಾಧರನು ಪತ್ನೀಸಮೇತನಾಗಿ ಭೌಮವಿಹಾರಾರ್ಥವಾಗಿ ಸರೋವರದ ಬಳಿಗೆ ಬಂದು ಜಲಕೇಳಿಯಲ್ಲಿದ್ದ ನಿಮ್ಮಯ್ಯನನ್ನು ಕಂಡು ಅವನ ವೈಭವಕ್ಕೆ ಮತ್ಸರಿಸಿ, ಸಹಿಸಲಾರದೆ ಒಂದು ದೊಡ್ಡ ಶಿಲೆಯನ್ನು ಕೊಳದಲ್ಲಿ ಹಾಕಿ ಸಂದಿಲ್ಲದಂತೆ ಮುಚ್ಚಿ ಬಿಟ್ಟುಹೋದನು.

ಅನಂತ:— (ವಿಸ್ಮಿತನಾಗಿ ಚಿಂತೆಯಿಂದ) ಹಾಗಾದರೆ ಈಗ ಅವರು ಏನಾಗಿರುವರು?

ಸಾ. ಭಟ್ಟಾರಕ:—

|| ಕಂದ || ತನುವಂ ತೊರೆದೈಹಿಕಮಂ
ನೆನೆಯದೆ ನೆಲೆಗೊಳಿಸಿ ಮನದೆ ಜಿನಪದಯುಗಮಂ
ವನಿತೆಯರೊಗೆದಿರ್ಪರ್ ನೆ
ಟ್ಟನೆ ಕೇಳ್ ಸೌಧರ್ಮ ಕಲ್ಪದೊಳ್ ಭುವನಪತೀ || ೨೯ ||

ಅನಂತ:— (ಸ್ವಲ್ಪ ಸಮಾಧಾನ ಹೊಂದಿ) ಮಹಾರಾಜನೋ?

ಸಾ. ಭ.:— ಹೇಳುವೆನು ಕೇಳು,—

|| ಕಂದ || ನರಪತಿಯಾರ್ತಧ್ಯಾನದ
ಪರಿಣಾಮದ ಮೋಹದಿಂದೆ ತನುವಂ ಬಿಸುಟುಂ
ಭರದಿಂದಜಗರಮಾಗಿಯೆ
ತಿರಿವಂ ಸರ್ಪತ್ರಯಾಖ್ಯ ಗುಹೆಯೊಳಗೀಗಳ್ || ೩೦ ||

ಅನಂತ:— (ಬೆದರಿ)

|| ಕಂದ || ಭವಭಯಕಂಜುವ ಸಂಸಾ
ರವನೋವುವ ಜೀವನಕಟ ಪಲವುಂ ತೆರದಿಂ
ತವೆ ಕಿಡುಗುಮೆಂದು ತಿಳಿದಾ
ಜವಂಜವಸ್ಥಿತಿಗೆ ಬಗೆ ಭಗೀರೆನುತಿರ್ಕುಂ || ೩೧ ||
ತಿಳಿಪಲ್ ಬರ್ಕುಮೆ ಅಹಿಯಾ
ದಿಳೇಶನಂ ಬಿಡಿಸಿ ಮೋಹಮಂ ಸಚ್ಚರಿತ
ಕ್ಕಳವಡಿಸಲ್ಬರ್ಕುಮೆ ಮುನಿ
ತಿಳಕಾ ದಯೆವೆರಸು ಬೆಸಸಿಮೆನಗಿದನೀಗಳ್ || ೩೨ ||

ಸಾ. ಭ.:— ಹಾಗಾದರೆ,—

|| ಕಂದ || ತಡೆಯದೆ ನೀಂ ಪೋಗಲ್ಲಿಗೆ
ನುಡಿ ಬೆದರದೆ ಧರ್ಮಮಂ ಗುಹಾಮುಖದಿಂದಾ

+912 d 8'3'61 Re-0.50
National Library
Calcutta-27

ಗಡೆ ಕೇಳ್ಗಂ ವಿಷಧರನಾ
ದೊಡಮಾದರದಿಂ ದನಂತವೀರ್ಯ ಕುಮಾರಾ || ೩೩ ||

ಮತ್ತೂ —

|| ಕಂದ || ದಿವಿಜಾವಾಸದಿನಾಬಳಿ
ಕನವತರಿಸುವ ನಿನ್ನ ತಾಯ್ವಿರುಂ ಕೇಳಿಸಿ ಧ
ರ್ಮವನಾಗಳೆ ಪೋಗುವರವ
ರವಿಮಾನಂಗಳ್ಗೆ ಧರ್ಮದಿಂದಾಗದುದೇಂ || ೩೪ ||

ಅನಂತ: — ಹಾಗೆಯೇ ಮಾಡುವೆನು. (ಹೊರಡುವನು.)

(ತೆರೆ ಬೀಳುವುದು.)

ಗರ್ಭಾಂಕ ೨.

ಸರ್ಪಾಶ್ರಯದ ಗುಹೆ.

(ಹುತ್ತದ ಬಳಿಗೆ ಪರಿವಾರಸಮೇತನಾಗಿ ಅನಂತವೀರ್ಯನು ಬರುವನು.)

ಅನಂತ: — (ಬಿಲದಕಡೆ ನೋಡುತ್ತ)

|| ಕಂದ || ಕಿವಿಯಿಲ್ಲದೆಯುಂ ಕೇಳಲ್
ಭುವನಾಧಿಪನಂತೆ ಬಿಡದೆ ಮುನ್ನಿದ್ದ ಕಷಾ
ಯುವನಹಿ ನೋಡಾ ಬರ್ಪುದು
ಸವಣರ ನುಡಿಯೆಂದುಮೆಂತುಮೇಂ ತಪ್ಪುಗುಮೇ | ೩೫ ||

(ಖೇದದಿಂದ ತನ್ನಲ್ಲಿಯೆ) ಅಯ್ಯೋ ವಿಧಿಯೇ, ಕರ್ಮಪರಿಪಾಕವು ಹೀಗಾಯ್ತೇ? ಶ್ರಾವಸ್ತಿನಗರದ ಮಹಾರಾಜನಾಗಿದ್ದು ಅನೇಕ ಪುರಂಧ್ರಿಯರು, ಪರಿಜನರು, ಪುತ್ರರು, ಮಿತ್ರರು, ಅಮಾತ್ಯರೊಡನೆ ಸುಖವಾಗಿರದೆ ತಿರ್ಯಗ್ಜನ್ಮವೆತ್ತಿ ಗುಹೆಯಲ್ಲಿದ್ದುಕೊಂಡು ದಿವ್ಯಭೋಗಗಳನ್ನು ಬಿಟ್ಟು ಕ್ರಿಮಿ, ಕೀಟ, ಮೂಷಿಕಾದಿಗಳನ್ನು ತಿಂದು ಹೊಟ್ಟೆಯನ್ನು ಹೊರೆಯುವ ಗತಿಬಂದಿತೇ? (ಪ್ರಕಾಶವಾಗಿ)

ಮಹಾರಾಜನೆನಿಸಿಕೊಂಡು ಆರ್ತರಿಗೆ ಅಭಯದಾನವನ್ನು ಮಾಡುವಂಥವನಾಗಿದ್ದು ಹೇಡಿಯಂತೆ ಮೃತ್ಯುವಿಗೆ ಹೆದರಿ ಆರ್ತಪರಿಣಾಮದಿಂದ ಈಗತಿಯನ್ನು ಪಡೆದೆಯಾ? ಮೀಸೆಯಿದ್ದ ಗಂಡಸಾಗಿ ಹೆಂಗಸರಿಗಿದ್ದ ಧೈರ್ಯವೂ ನಿನಗೆ ಇಲ್ಲದೆ ಹೋಯಿತಲ್ಲಾ! ನಿನಗಾಗಿ ಬುದ್ಧಿಯಿಲ್ಲದಿದ್ದರೂ ಸದುಪದೇಶವನ್ನು ಮಾಡಿದ ಹೆಂಗಸರ ಮಾತನ್ನು ಕಿವಿಗೊಟ್ಟು ಕೇಳದೆ ದುರ್ಗತಿಯಲ್ಲಿ ಬೀಳಬಹುದೇ? ನೋಡು, ನಿನಗೆ ಬಂದ ಅಪಮೃತ್ಯುವು ಅವರಿಗೂ ಬಂದಿತ್ತಲ್ಲವೇ? ನಿನ್ನಂತೆ ಹೇಡಿಯಾಗಿ ಹೆದರದೆ ನಿಶ್ಚಲಮತಿಯಿಂದ ಅರ್ಹಚ್ಚರಣಾಬ್ಜಂಗಳನ್ನು ಹೃತ್ಕಮಲದಲ್ಲಿ ನಿಲ್ಲಿಸಿ ಶುಭಪರಿಣಾಮದಿಂದ ತನುವನ್ನು ತ್ಯಜಿಸಿ ದಿವ್ಯಶರೀರವನ್ನು ಪಡೆದು ಸೌಧರ್ಮಕಲ್ಪದಲ್ಲಿ ವಾಸಮಾಡುವರಲ್ಲಾ,— ನಿನಗೂ ಹಾಗೆ ಶುಭಪರಿಣಾಮವೇಕಾಗಲಿಲ್ಲ? ದುರ್ಮೋಹವನ್ನೇಕೆ ಬಿಡದೆಹೋದೆ? ಮುಂದಿದ್ದ ಸುಖಕ್ಕೂ ಈಗಿನ ಗತಿಗೂ ತಾರತಮ್ಯವೀಗಲಾದರೂ ತಿಳಿಯಿತೇ? ಇನ್ನಾದರೂ ಆ ಹಾಳಾದ ದುರ್ಮೋಹವನ್ನು ಬಿಡುವುದಕ್ಕೆ ಪ್ರಯತ್ನಮಾಡು; ನಿನಗೆ ಒಳ್ಳೆಯಗತಿಯೇ ಪ್ರಾಪ್ತವಾಗುವುದು. ಹಾಗೆ ಬಿಡದೆ ಇನ್ನೂ ದೇಹದಲ್ಲಿಯೂ ಹೆಂಡಿರುಮಕ್ಕಳಲ್ಲಿಯೂ ಭೋಗೋಪಕರಣಗಳಲ್ಲಿಯೂ ಮೋಹವನ್ನು ಇಟ್ಟಿರುವೆಯಾದರೆ ದುಸ್ತರವಾದ ನರಕದಲ್ಲಿ ಬಿದ್ದು ನರಲುವೆ.

(ಹಾವು ಮುಂದುಮುಂದಕ್ಕೆ ಬಂದು ಕಿವಿಗೊಟ್ಟು ಕೇಳುತ್ತಿರುವುದು. ಅದೇ ಸಮಯದಲ್ಲಿ ಪೂರ್ವರೂಪದಿಂದ ಪಟ್ಟದರಸಿಯರಾಗಿದ್ದ ನಾಲ್ವರೂ ದೇವಲೋಕದಿಂದ ಇಳಿದು ಬರುವರು.)

(ಅನಂತವೀರ್ಯನೂ ಪರಿವಾರದವರೂ ವಿಸ್ಮಿತರಾಗಿ ನೋಡುತ್ತಿರುವರು)

(ಬಂದ ನಾಲ್ವರು ರಮಣಿಯರೂ ಒಬ್ಬೊಬ್ಬರಾಗಿ ಒಂದೊಂದು ಪದ್ಯವನ್ನು ಸರ್ಪದ ಮುಂದೆ ಹೇಳುವರು.)

೧ನೆಯವಳು:—

॥ ಕಂದ ॥ ಲಾಲಿಸಿ ನಮ್ಮಯ ಮಾತಂ
ಕೇಳದೆ ಜಿನಪಾದಪದ್ಮಮಂ ನೆನೆಯದೆ ನೀಂ
ಕಾಳಾಹಿಯಾಗಿ ನಮೆವೈ
ಖೂಳರ್ ನಿನ್ನಂತಿರೊಳರೆ ಪೆರವರು ಮಾಗಳ್ ॥ ೩೬ ॥

೨ನೆಯವಳು:—

|| ಕಂದ || ಆಗದುದಕ್ಕೆಳಸದೆ ನೀ
ನೀಗಳುಮಿದರಿಂ ನಿಕೃಷ್ಟಗತಿಗಿಳಿಯದೆ ಕೋ
ಳ್ಹೋಗದೆ ಜಾನಿಸು ನಿರ್ಮಲ
ನಾಗಿ ಜಿನಾಧೀಶನಂಘ್ರಿವನರುಹಯುಗಮಂ || ೩೭ ||

೩ನೆಯವಳು:—

|| ಕಂದ || ಬಿಡುಬಿಡು ಮೋಹವನಿನ್ನಾ
ದೊಡಮುಳಿ ಮುನ್ನಿರ್ದ್ದ ಗಾಂಪತನವಂ ನೀಂ ಬ
ಲ್ವಿಡಿವಿಡಿ ಜಿನಪದ ಯುಗಮಂ
ಪಡೆವೈ ಸ್ವರ್ಗಾಪವರ್ಗ ಸುಖಮಂ ಕಡೆಯೊಳ್ || ೩೮ ||

೪ನೆಯವಳು:—

|| ಕಂದ || ಇನ್ನುಂ ಮೋಹವನುಳಿಯದೆ
ಪನ್ನಗನಾಗಿರ್ದ್ದು ಕಿಡೆ ಘುಳುಮ್ಮೆನೆ ನರಕ
ಕ್ಕನ್ನೆಯದಿಂದಿಳಿವುದು ಬೇ
ಡುನ್ನತ ಜಿನಪಾದ ಸೇವೆಯಂ ಬಗೆಮನದೊಳ್ || ೩೯ ||

(ಸರ್ಪವು ಸಂತೋಷದಿಂದ ಅವರನ್ನೇ ನೋಡುವುದು.)

(ನಾಲ್ವರು ರಮಣಿಯರೂ) ನಾವು ಬಂದ ಕಾರ್ಯವಾಯಿತು. ಇನ್ನು ಹೊರಡುವ.

(ಹೋಗುವರು.)

ಅನಂತ:— (ಆಶ್ಚರ್ಯದಿಂದ ಬೆರಗಾಗಿ)

|| ಕಂದ || ಜಿನಪದ ಸೇವೆಯೊಳೆರಗಿಸಿ
ಮನಮಂ ತರಿಸಂದು ನೆಗಳ್ದೊಡಯ್ದುಂ ವ್ರತದೊಳ್
ತನುವಂ ತೊರೆದ ಮಹಾತ್ಮ
ರ್ಗ್ಗನಿವಿರಿದಗ್ಗಳಿಕೆ ದೊರೆವುದಾವುದೊ ಗಹನಂ || ೪೦ ||

ಆಹಾ! ಗುರುಗಳು ಹೇಳಿದುದರಲ್ಲಿ ಎಳ್ಳಷ್ಟಾದರೂ ವ್ಯತ್ಯಾಸವಿಲ್ಲದೆ ಎಲ್ಲವೂ ಸರಿಯಾಗಿ ನಡೆದಿರುವುದು. ಇನ್ನು ಮುಂದೆ ಮಾಡತಕ್ಕುದೇನೆಂದು ಗುರುಗಳ ಸಂದರ್ಶನದಿಂದ ತಿಳಿದು ಅವರ ಆಜ್ಞೆಯಂತೆ ನಡೆದುಕೊಳ್ಳುವೆನು.

(ಎಲ್ಲರೊಡನೆ ಹೊರಡುವನು)

ಗರ್ಭಾಂಕ ೩.

ಋಷ್ಯಾಶ್ರಮ.

(ಸಾರಸ್ವತ ಋಷಿಗಳು ಧರ್ಮೋಪದೇಶವನ್ನು ಮಾಡುತ್ತಿರುವರು ಅನಂತವೀರ್ಯನು ಬಂದು ನಮಸ್ಕರಿಸುವನು)

ಸಾರ.:— ಸರ್ಪಾಶ್ರಯ ಗುಹೆಗೆ ಹೋಗಿದ್ದೆಯಾ?

ಅನಂತ:— ಮುನಿಪುಂಗವ! ತಮ್ಮ ಅಪ್ಪಣೆಯಂತೆ ಸರ್ಪಾಶ್ರಯ ಗುಹೆಗೆ ಹೋದೆನು. ನನ್ನ ಅಲ್ಪಮತಿಗೆ ತೋರಿದ ಕೆಲವು ಮಾತುಗಳನ್ನೂ ಆಡಿದೆನು. ಸರ್ಪವು ಗುಹೆಯ ದ್ವಾರದಿಂದ ಹೊರಗೆ ಬಂದು ಹೇಳಿದುದೆಲ್ಲವನ್ನೂ ಕೇಳಿತು. ಆ ಮೇಲೆ ನನ್ನ ತಾಯಿಯವರು ನಾಲ್ವರೂ ಬಂದು ಧರ್ಮೋಪದೇಶವನ್ನು ಮಾಡಿ ಹೋದರು. ಅವರ ಉಪದೇಶವನ್ನೂ ಸರ್ಪವು ಕೇಳಿತು. ಗುರುರಾಜ! ಇನ್ನೂ ಎಷ್ಟುಕಾಲವಾ ಸರ್ಪವು ಈ ಗತಿಯಲ್ಲಿ ನರಳಬೇಕು? ಅದಕ್ಕೆ ಸದ್ಗತಿ ಬರುವಂತೆ ಮಾಡುವುದಕ್ಕೆ ತಾವೇ ಆವುದಾದರೂ ಉಪಾಯವನ್ನು ನೋಡಿ ಹೇಳಬೇಕು. ಆಜ್ಞೆಯಾದಂತೆ ನಡೆಯಲು ಸಿದ್ಧನಾಗಿರುವೆನು. (ಮತ್ತೆ ಕೈಮುಗಿವನು.)

ಸಾರ.:— ಕುಮಾರ! ಇನ್ನು ಆ ಸರ್ಪಕ್ಕೆ ಆಯುಷ್ಯವು ಹದಿನೈದೇ ದಿನಗಳಿರುವುವು. ಅದರೊಳಗೆ ನೀನು ರತ್ನತ್ರಯಗಳನ್ನು ತನುಮನಗಳಲ್ಲಿ ನಿಲ್ಲಿಸಿ ಶುದ್ಧ ಭಾವನೆಯಿಂದ ದಾನ, ಪೂಜೆ, ತಪ, ಮೊದಲಾದುವನ್ನೂ ಮಾಡಬೇಕು.

ಅನಂತ:— ಅಪ್ಪಣೆಯಾದಂತೆ ಮಾಡುವೆನು. ಸನ್ನಿಧಾನದಲ್ಲಿ ಮತ್ತೊಂದು ಪ್ರಾರ್ಥನೆ.

ಸಾ.:— ಸಂಕೋಚವೇಕೆ? ಹೇಳು.

ಅನಂತ:— ತಾವೇ ಆ ಸರ್ಪಕ್ಕೆ ಧರ್ಮೋಪದೇಶವನ್ನು ಮಾಡಿ ವ್ರತವನ್ನು ಕೊಡಿಸಬೇಕು.

ಸಾ.:— ತಥಾಸ್ತು.

(ಎಲ್ಲರೂ ಹೊರಡುವರು)

ಎರಡನೆಯ ಅಂಕವು ಮುಗಿದುದು.

ಶ್ರೀಃ

ತೃತೀಯಾಂಕ.

ಗರ್ಭಾಂಕ ೧.

ಮೇರುನಗದ ಸಮೀಪದಲ್ಲಿರುವ ಚೈತ್ಯಾಲಯ.

(ವಿಮಲನೆಂಬ ಭವನವಾಸಿಗನು ಬರುವನು)

ವಿಮಲ:— (ಚೈತ್ಯಾಲಯವನ್ನು ವಂದಿಸಿದ ಬಳಿಕ ಸ್ವಲ್ಪದೂರ ಮುಂದೆ ನಡೆದು)

॥ ಕಂದ ॥ ಸಾರಸ್ವತ ವಚನಸುಧಾ
ಧಾರೆಯನಾನೀಂಟಿ ಸರ್ಪಗುಹೆಯೊಳಗಿರ್ದುಂ
ಕ್ರೂರವ್ಯಾಳಶರೀರಂ
ಭೋರೆನೆ ಬಿಡೆ ಬಂದು ಭವನವಾಸಿಗನಾದೆಂ ॥ ೪೧ ॥
ಮನವೊಲ್ದಲ್ಲಿಗೆ ಪೋದೆಂ
ಜಿನರಂ ಚೈತ್ಯಾಲಯಂಗಳಂ ಬಂದಿಸಿದೆಂ
ಕನಸಿನವೊಲ್ ತಿಳಿದಾ ಮು
ನ್ನಿನ ಭವದಾಟಂಗಳೆಲ್ಲಮಂ ಪರಿಕಿಸಿದೆಂ ॥ ೪೨ ॥
ಜಿನಧರ್ಮಶ್ರವಣದೆ ನೀ
ನಿನಿವಿರಿದು ಸುಖಕ್ಕೆ ನೋಂತೆಯಹಿಯಾಗಿರ್ದುಂ
ಜಿನದೀಕ್ಷೆಗೆ ಪೂಣ್ದಿರೆ ಜೀ
ವನೆ ನೀನಿನ್ನಾವ ಸುಖಕೆ ಭಾಜನನಾಗೈ ॥ ೪೩ ॥

(ಸ್ವಲ್ಪ ಮುಂದಕ್ಕೆ ನಡೆದು)

ಇನ್ನೆಲ್ಲಿಯಾದರೂ ಸುತ್ತಿ ಕೊಂಡು ಬರುವೆನು. ತಿರ್ಯಗ್ಗತಿಯಲ್ಲಿಯಾಗಲಿ, ಮನುಷ್ಯಗತಿಯಲ್ಲಿಯಾಗಲಿ ಇಂಥ ಸುಖವು ಎಂದಿಗೂ ದೊರೆಯಲಾರದು. ನನ್ನ ಮನಬಂದ ಕಡೆಗೆ ಹೋಗಬಹುದು; ಬೇಕಾದುದನ್ನು ಮಾಡಬಹುದು; ಊಟ ಮಾಡಿದರೆ ಮಾಡಬಹುದು, ಬಿಟ್ಟರೆ ಬಿಡಬಹುದು; ನಿಂತ ಕಡೆಯಿಂದ ಮತ್ತೊಂದು ಕಡೆಗೆ ಹೋಗಬೇಕಾದರೆ ವಾಹನವೂ ಬೇಡ, ಮಾರ್ಗವೇ ತಿಳಿಯಬೇಕಾಗಿಲ್ಲ; ಮನಸ್ಸು ಸರಿಯಾದ ಮಾರ್ಗವನ್ನು ತಾನಾಗಿಯೇ ತಿಳಿದು ಕರೆದುಕೊಂಡು ಹೋಗುವುದು! ಭಲೆ, ನನಗೆ ಸಮಾನರಾರುಂಟು?

(ಮತ್ತೆ ಕೆಲವು ಹೆಜ್ಜೆಗಳನ್ನಿಡುವನು ನಡೆಯುತ್ತಿದ್ದಂತೆಯೇ ತಡೆದಂತೆ ನಟಿಸುತ್ತ ಸುತ್ತಲೂ ನೋಡಿ)

ಏನಿದು, ನನ್ನ ಪಥವನ್ನು ತಡೆಯುತ್ತಿರುವುದು? ಈ ವರೆಗೆ ನನ್ನ ಮಾರ್ಗವನ್ನು ತಡೆದವರಾರೂ ಇಲ್ಲ. ಚೆನ್ನಾಗಿ ನೋಡುವೆನಿರಲಿ, (ಕೆಳಗೆ ನೋಡಿ ಕೋಪದಿಂದ ಹಲ್ಲನ್ನು ಕಡಿಯುತ್ತ)

|| ಕಂದ || ಅಂದಾಂ ಕಳತ್ರಸಹಿತಂ
ನಂದನ ವನದೊಳ್ ವಿನೋದದಿಂದಿರೆ ಪುರುಡಿಂ
ಕೊಂದೆಮ್ಮಂ ವಿದ್ಯೆಗಳಂ
ಬಂದೀಗಳ್ ಸಾಧಿಸುತ್ತಮಿಪ್ಪಂ ದುರುಳಂ || ೪೪ ||

ಆದುದರಿಂದ—

|| ಕಂದ || ಕಂಡುಂ ಕೆಮ್ಮನೆ ಬಿಟ್ಟೊಡೆ
ಗಂಡತನಂ ಕಿಡುಗುಮುರದೆ ವಿದ್ಯಾಬಲದಿಂ.
ಹಿಂಡಿಹಿಳಿವಂ ಜಗತ್ತಂ
ಚಂಡಾಲಂ ವಜ್ರದಾಡನೀಗಗನ ಚರಂ || ೪೫ ||

ಹಾಗಾಗದಂತೆ ಈಗಲೇ—

|| ಕಂದ || ಹಿಂಡುವೆ ನಿವನಂ ಮೊದಲೊಳ್
ರಂಡೆಯರಂ ಯಮುನಬಾಯ್ಗೆ ತುತ್ತಾಗಿಸುವೆಂ

ಅಂಡಲೆವೆಂ ವಿದ್ಯೆಗಳಂ
ಚಂಡಾಲಂ ಸಿಲ್ಕಿಬಿದ್ದನೆಲ್ಲಿಗೆ ಪೋಪಂ ॥ ೪೬ ॥

(ಎಂದು ಅವಸರದಿಂದ ಹೋಗುವನು.)

ಗರ್ಭಾಂಕ ೨.

ಮೇರುನಗದ ಕೆಳಗಡೆಯ ಭೂಮಿ.

(ಕಳತ್ರಸಮೇತನಾದ ವಜ್ರದಾಡನು ವಿದ್ಯೆಯನ್ನು ಸಾಧಿಸುತ್ತಿರುವನು)

ವಜ್ರದಾಡ:— ಪ್ರಿಯೆ, ಮದನವೇಗೆ! ಈಗ ನನಗೆ ವಶವಾಗಿರುವ ವಿದ್ಯೆಗಳಾವುವು— ಹೇಳು, ನೋಡುವ!

ಮದನವೇಗೆ:— ಒಂದೇ ಮಾತಿನಲ್ಲಿ ಹೇಳಲೇ?

ವಜ್ರದಾಡ:— ಹೇಳು.

ಮದನವೇಗೆ:— ದುರ್ವಿದ್ಯೆ.

ವಜ್ರದಾಡ:— ಛೀ, ನೀನು ಎಂದೂ ಹೀಗೆಯೇ ನನ್ನ ವಿದ್ಯೆಗಳನ್ನು ತಿರಸ್ಕರಿಸಿ ನುಡಿವೆ?

ಮದನವೇಗೆ:— ಇನ್ನು ಮೇಲೆ ಪುರಸ್ಕರಿಸಿ ನುಡಿವೆನು. ಆವಾವ ವಿದ್ಯೆಗಳು. ಹೇಳಲೇ?

ವಜ್ರದಾಡ:— ಹೇಳು ನೋಡುವ?

ಮದನವೇಗೆ:— ಪ್ರಜ್ಞಪ್ತಿ, ಕಾಮರೂಪಿಣಿ, ಅಗ್ನಿಸ್ತಂಭಿನಿ, ವಿಶ್ವಪ್ರಭೆ, ಆವೇಶಿನಿ, ಪ್ರಸ್ಥಾಪಿನಿ, ಪ್ರಹರಿಣೆ, ಪ್ರಮೋಹಿನಿ, ಸಂಕ್ರಾಮಿಣಿ, ಆವರ್ತಿನಿ, ಸಂಗ್ರಹಿಣಿ, ಭಂಜಿನಿ, ಪ್ರಹಾಪಿನಿ.

(ಅಷ್ಟರಲ್ಲಿ ವಿಮಲದೇವನು ಬಂದು ವಜ್ರದಾಡನನ್ನು ಒದೆಯುವನು; ಅವನು ವಿದ್ಯೆಗಳನ್ನು ಸಾಧಿಸುವುದಕ್ಕೆ ಇರಿಸಿದ್ದ ಸಾಮಗ್ರಿಗಳನ್ನು ಕಿತ್ತು ಹಾಕುವನು.)

(ವಜ್ರದಾಡನು ಭಯದಿಂದ ನಡನಡುಗುತ್ತ ಬಿದ್ದಿರುವನು. ಅವನ ಪತ್ನಿಯರು ಭಯ ಚಕಿತೆಯರಾಗಿ ನೋಡುತ್ತ ನಿಲ್ಲುವರು.)

ವಿಮಲದೇವ:—(ವಜ್ರದಾಡನನ್ನು ದರದರನೆ ಕಾಲಹಿಡಿದೆಳೆದು ತಲೆ ಕೆಳಗಾಗಿಸಿ ಬಿಡುತ್ತ.)

ಧೂರ್ತ, ದುರುಳ, ದುಷ್ಟ, ವಿದ್ಯಾಬಲದ ಗರ್ವದಿಂದ ನಿರಪರಾಧಿಗಳಾಗಿ ಜಲಕೇಳಿಯನ್ನು ಸಲಿಸುತ್ತಿದ್ದ ನಮ್ಮನ್ನು, ದುರ್ವ್ಯಾಕೃತಿಗೀಡಾಗಿಸಿದೆಯಲ್ಲವೇ? ನನ್ನ ಅಷ್ಟೈಶ್ವರ್ಯಕ್ಕೂ ಪರಿಗ್ರಹಕ್ಕೂ ಪರಿವಾರಕ್ಕೂ ಸಾಮ್ರಾಜ್ಯಕ್ಕೂ—ಮತ್ಸರಿಸಿ, ನಮ್ಮ ತಲೆಯಮೇಲೆ ಶಿಲೆಯನ್ನು ಹಾಕಿ ಪ್ರಾಣವನ್ನು ಕಳೆದೆಯಲ್ಲವೇ? ನಿನ್ನ ವಿದ್ಯಾಬಲಗರ್ವಕ್ಕೆ ತಕ್ಕ ಫಲವನ್ನು ಅನುಭವಿಸು! ನಮ್ಮನ್ನು ನೀರುಕುಡಿಸಿ ಕೊಂದ ಪಾತಕನಲ್ಲವೆ ನೀನು? ಇದೊ, ನಿನಗೆ ನೀರುಕುಡಿಸುವೆನು ಬಾಯಿ ಬಿಡು.

(ಎಂದು ವಜ್ರದಾಡನ ಬಾಯನ್ನು ಬಲಾತ್ಕಾರದಿಂದ ಬಿಡಿಸುವನು.) ಮತ್ತು, ನನ್ನ ಪತ್ನಿಯರನ್ನು ಕೊಂದ ಘಾತುಕನಲ್ಲವೇ ನೀನು? ನೋಡೀಗ ನಿನ್ನ ಪತ್ನಿಯರನ್ನು ಏನು ಮಾಡುವೆನು. (ವಜ್ರದಾಡನ ಪತ್ನಿಯರನ್ನು ಒಂದೇ ಏಟಿಗೆ ಉರುಳಿಸಿ ಬಿಡುವನು)

ವಜ್ರದಾಡನು ತನ್ನ ಅವಸ್ಥೆಯನ್ನೂ ತನ್ನ ಪತ್ನಿಯರಿಗೆ ಬಂದ ವಿಪತ್ತನ್ನೂ ನೋಡಿ ಖಿನ್ನ ಮನಸ್ಕನಾಗುವನು.)

ವಿಮಲದೇವ:—(ವಜ್ರದಾಡನನ್ನು ನೋಡಿ) ವಿದ್ಯೆಗಳನ್ನು ಸಾಧಿಸುತ್ತಿರುವೆಯಾ ಇಲ್ಲಿಗೆ ಬಂದು? ಆವಾವ ವಿದ್ಯೆಗಳನ್ನು ಸಾಧಿಸುತ್ತಿರುವೆ, ನೀನು? ಜನರನ್ನು ಹಿಂಸಿಸುವುದಕ್ಕೆ ಬೇಕಾದ ವಿದ್ಯೆಗಳೆಲ್ಲವೂ ನಿನಗೆ ವಶವಾದುವಲ್ಲವೇ? ಅಂಥ ವಿದ್ಯೆಗಳಿಂದಲ್ಲವೇ ಅಂದು ನೀನು ನಮ್ಮನ್ನು ಕೊಂದುದು? ಬಲಶಾಲಿ, ವಿದ್ಯಾಧರ, ಖಚರ, ಅಂಬರಚರ, ವಜ್ರದಾಡ, ಅಬ್ಬಬ್ಬ! ಎಷ್ಟೊಂದು ಬಿರುದುಗಳು ನಿಮಗೆ; ಎಷ್ಟು ವಿದ್ಯೆಗಳು ನಿಮಗೆ ಅಧೀನವಾಗಿರುವುವು? ಖೇಚರರ ಮಹಿಮೆ ಭೂಚರರಗುಂಟೇ? (ಸ್ವಲ್ಪ ಹೊತ್ತು ನಿಷ್ಪ್ರಾಣನಾಗಿದ್ದುದನ್ನು ನೋಡಿ ಮತ್ತೆ)

|| ಕಂದ | ಕೊಳದೊಳಗಿರ್ದೆಮ್ಮಂ ನೀಂ
ಶಿಲೆಯಿಂ ಮುಚ್ಚಿರ್ದ್ದು ಕೊಂದ ನಿಮ್ಮಂದಿನ ಕೈ
ಯುಳವೀಗಳೆತ್ತ ಪೋದುದೊ
ಕಲಿಗಳ್ ನೀವಮ್ಮ ನಿಮುಗಮಿಾ ಎಡರಾಯ್ತೇ? || ೪೭ ||

ಪಲವುಂ ವಿದ್ಯೆಗಳಂಪಿರಿ
ದೊಲವಿಂ ಸಾಧಿಸಿದಿರಮ್ಮ ಬಲ್ಪಿಂ ಕೊನೆಯೊಳ್
ಫಲಮಂ ಪಡೆದುಣ್ಬುಮಹಾ
ಬಲರ್ಕೈ ನೀವಮಮ! ನಿಮಗಮೀಗತಿಯಾಯ್ತೇ? । ೪೮

(ಎಂದು ಮೂದಲಿಸಿ ಹೋಗುವನು. ತೆರೆ ಬೀಳುವುದು.)

ಗರ್ಭಾಂಕ ೩.

ಮೇರುನಗದ ಪ್ರಾಂತದಲ್ಲಿ ಮೊದಲಿದ್ದ ಸ್ಥಳ.

(ವಿಮಲ ದೇವನು ಬರುವನು)

ವಿಮಲದೇವ:— (ವಸ್ತ್ರಾಭರಣಗಳನ್ನು ನೋಡಿಕೊಂಡು ಚಿಂತಾಕ್ರಾಂತನಾಗಿ)

ಎಲ್ಲಾ ಕಡೆಯಲ್ಲಿಯೂ ನೋಡಿಬಂದೆನು. ಇನ್ನು ಭೂಮಿಯಲ್ಲಿ ನರಜನ್ಮವನ್ನೆತ್ತದಿರಲು ಆಗದು. ಏನುಮಾಡುವುದು? —

॥ಕಂದ॥ ಆನೆಂತು ಪೋಪೆನಕಟಾ
ಆ ನರಲೋಕಕ್ಕೆ ಗರ್ಭದೊಳಗಿರ್ದಪೆನೆಂ
ತಾನವಮಾಸಂ ಕ್ರಿಮಿಗಳಿ
ನಾನಾರುವ ನಾತದಲ್ಲಿ ಅಯ್ಯೋ ವಿಧಿಯೇ । ೪೯ ॥
ಅರುದಿಂಗಳಾಯುವೊಳದೆಂ
ದರಿತೆಂ ಮಲಿನಾಂಬರಂಗಳಿಂದಿನ್ನೇವೆಂ
ಮೊರೆಯಿಡುವೆನಾರೊಳಯ್ಯೋ!
ನಿರಿಸಲ್ಕಾರ್ ನಂಟರಿಲ್ಲಿ ಕೆಳಗಿಳಿವೆಡೆಯೊಳ್ । ೫೦ ।
ಸುರಪತಿಯಂ ಸೇವಿಸಿದೆಂ
ದಿರಂತದಂ ಮೇರುನಗದ ಚೈತ್ಯಾಲಯಮಂ

ಪಿರಿದುಂ ಬಂದಿಸಿದೆಂ ತಡೆ
ವರನರಿಯೆಂ ಬರ್ಪ ನರಕಪತನಮನೆಂತುಂ ॥ ೫೧ ॥
ಸುರಪತಿಯುಮೂರನೀಗಳ್
ಪಿರಿದೆನಿಸುವ ಕರ್ಮಗತಿಯನೆಂತುಂ ಪಡೆಯಲ್
ತಿರಿಗುಂ ಜೀವಂ ಮತ್ತಂ
ತಿರಿದೊಡೆ ನರಜನ್ಮವಕ್ಕೆ ಅದುವೇ ಸಾಲ್ಗುಂ ॥ ೫೨ ॥
ನರಜನ್ಮದಲ್ಲಿ ಸಮ್ಯ
ಕ್ಚರಿತ್ರದೊಳ್ ನೆಗಳೆವಿಮಲ ರತ್ನತ್ರಯಮುಂ
ದೊರೆಕೊಳ್ಗುಮೆನಗೆ ಬಳಿಕಾಂ
ತಿರಿಯದೆ ಸಾಧಿಸುವೆನಾದಮುವೃತಶ್ರೀಯಂ ॥ ೫೩ ॥

(ಹೋಗುವನು.)

ಮೂರನೆಯ ಅಂಕವು ಮುಗಿದುದು.

ಶ್ರೀಃ

ತುರೀಯಾಂಕ.

ಗರ್ಭಾಂಕ ೧.

ಚಂಪಾಪುರ— ಅರಮನೆಯ ಬಾಗಿಲ ಮುಂಗಡೆಯಲ್ಲಿ.

(ವಿಶ್ವಮತಿ ೫೦೦ ರಥಗಳನ್ನೂ ವಿಶ್ವಕರ್ಮನು ಒಂದು ಗಾಲಿಯನ್ನೂ ತೆಗೆದುಕೊಂಡು ನಿಂತಿರುವರು.)

ವಿಶ್ವಕರ್ಮ:— ಏನಯ್ಯಾ, ರಥಗಳನ್ನು ಮಾಡಿಕೊಂಡು ಬಂದೇ ಬಟ್ಟೆ?

ವಿಶ್ವಮತಿ:— ಮಾಡದೆ ಇದ್ದರೆ, ನಾಳೆ ಬದುಕುವುದು ಹೇಗಪ್ಪಾ? ರಾಜಾಜ್ಞೆಯಾದ ಮೇಲೆ ಮಾಡಿಯೇ ತೀರಬೇಕು.

ವಿಶ್ವಕರ್ಮ:— ಇನ್ನೂ ಅವಧಿ ಮುಗಿಯಲಿಲ್ಲವಲ್ಲ.

ವಿಶ್ವಮತಿ:— ಊ, ನಮಗೆ ಕೊಟ್ಟಿದ್ದ ಆರು ತಿಂಗಳ ಅವಧಿ ನಿನ್ನಿನ ದಿವಸಕ್ಕೆ ಮುಗಿಯಿತು. ಅದಕ್ಕಲ್ಲವೆ, ರಾಜಭಟರು ನಿನ್ನೆ ಬಂದು ನಮಗೆ ಹೇಳಿ ಹೋದರು.

ವಿಶ್ವಕರ್ಮ:— ನಾನಿನ್ನೂ ಮಾಡಿಯಾಗಲಿಲ್ಲವೆಂದು ಅವರಿಗೆ ಹೇಳಿದೆನು.

ವಿಶ್ವಮತಿ:— ನಿನ್ನಂಥ ಹೆಡ್ಡನನ್ನು ನಾನೆಲ್ಲಿಯೂ ಕಾಣಲಿಲ್ಲ.

ವಿಶ್ವಕರ್ಮ:— ಏನು ಮಾಡಬೇಕಾಗಿತ್ತು, ಹೇಳು?

ವಿಶ್ವಮತಿ:— ನಾನು ಮಾಡಿದುದನ್ನು ಮುಂಚೆ ಹೇಳುವೆನು, ಆ ಮೇಲೆ ನಿನ್ನ ಮಾತಾಗಲಿ.

ವಿಶ್ವಕರ್ಮ:— ಆಗಲಿ, ಹೇಳು.

ವಿಶ್ವಮತಿ: ಬಂದಿದ್ದ ರಾಜಭಟರಿಗೆ ಒಂದು ಕುಕ್ಕೆಯ ತುಂಬ ಕೋಳಿಯ ಮೊಟ್ಟೆಗಳನ್ನು ಕೊಟ್ಟೆನು; ಮನೆಯಲ್ಲಿದ್ದ ನಿಂಬೆಯ ಹಣ್ಣಿನಷ್ಟು ಹೊನ್ನನ್ನೂ ಕೊಟ್ಟೆನು. ರಥಗಳು ಸರಿಯಾಗಿವೆಯೆಂದು ಅವರು ಮಹಾರಾಜರಿಗೆ ತಿಳಿಸುವುದಾಗಿ ವಾಗ್ದಾನ ಮಾಡಿ ಹೋದರು. ನೀನೂ ಹಾಗೆ ಮಾಡಿದ್ದರೆ ನಿನಗಾವ ಕಷ್ಟವೂ ಬರುತ್ತಿರಲಿಲ್ಲ.

ವಿಶ್ವಕರ್ಮ:— ಈಗ ಏನು ಮಾಡಲಿ, ಹೇಳು. ಇನ್ನೂ ಅವಧಿಯಿರುವುದೆಂದು ನನಗೆ ತೋರಿರುವುದು. ನೀನೇನೋ ಇಲ್ಲವೆನ್ನುತ್ತೀಯೆ. ಅದು ಹೇಗೆ?

ವಿಶ್ವಮತಿ:—(ತನ್ನಲ್ಲಿ) ಇವನೆಲ್ಲಿಯೋ ದಟ್ಟಹುಚ್ಚನಂತೆ ಕಾಣುವನು. (ಪ್ರಕಾಶ) ಕೇಳೋ, ಗಗ್ಗ.

ವಿಶ್ವಕರ್ಮ:— ಹುಂ,

ವಿಶ್ವಮತಿ:— ಹಸ್ತಿನಾಪುರದ ಅರಸನು ಗುರುದತ್ತರಾಯನೆಂಬುದನ್ನು ಬಲ್ಲೆಯಾ?

ವಿಶ್ವಕರ್ಮ:— ಹುಂ,

ವಿಶ್ವಮತಿ:— ಅವನ ಕಡೆಯಿಂದ ಹೆಗ್ಗಡೆಗಳು ನಮ್ಮ ಚಂಪಾಪುರಕ್ಕೆ ಬಂದಿದ್ದುದು ಎಂದು?

ವಿಶ್ವಕರ್ಮ:— (ಆಲೋಚಿಸಿ) ಆರು ತಿಂಗಳಿಗೆ ಹಿಂದೆ.

ವಿಶ್ವಮತಿ:— ಅವರೇಕೆ ಬಂದಿದ್ದರು?

ವಿಶ್ವಕರ್ಮ:— ಏಕೋ ಆರಿಗೆ ಗೊತ್ತು?

ವಿಶ್ವಮತಿ:— ನಮ್ಮ ಮಹಾರಾಜರ ಮಗಳಾದ ಅಭಯಮತಿ ಕುಮಾರಿಯನ್ನು ಗುರುದತ್ತರಾಯನಲ್ಲಿಗೆ ಕಳುಹಬೇಕೆಂದು ಕೇಳಲು ಬಂದಿದ್ದರು.

ವಿಶ್ವಕರ್ಮ:—ಬಂದರೇನಾಯ್ತು? ಕಳುಹಲಿಲ್ಲ. ಆಮೇಲೆ?

ವಿಶ್ವಮತಿ:— ಆಮೇಲೆ ಗುರುದತ್ತರಾಯನಲ್ಲಿ ವೈರವುಂಟಾಯ್ತು; ಅವನು ದಂಡೆತ್ತಿ ಇಲ್ಲಿಗೆ ಬಂದರೆ ಯುದ್ಧವಾಗುವುದೆಂದು ತಿಳಿದು ನಮ್ಮ ಮಹಾರಾಜರು ಆ ದಿನವೇ ನಮ್ಮಿಬ್ಬರನ್ನೂ ಕರೆಯಿಸಿ ಐನೂರೈನೂರು ರಥಗಳನ್ನು ಆರು ತಿಂಗಳುಗಳೊಳಗೆ ಮಾಡಿಕೊಂಡುಬರತಕ್ಕುದೆಂದು ಆಜ್ಞೆಯನ್ನು ದಯೆಪಾಲಿಸಿದರು.

ವಿಶ್ವಕರ್ಮ:— ಸರಿ ಸರಿ; ತಿಳಿಯಿತು. ಅದು ಹಾಗಿರಲಿ, ಈಗ ನನಗೇನಾದರೂ ಉಪಾಯವೊಂದನ್ನು ನೀನೇ ಹೇಳಿಬಿಡು.

ವಿಶ್ವಮತಿ:— ಒಳ್ಳೆಯಕೆಲಸ, ನಿನಗಾಗಿ ನಾನು ಮಹಾರಾಜರಲ್ಲಿ ಸುಳ್ಳು ಹೇಳಲೇ?

ರಾಜಾಜ್ಞೋಲ್ಲಂಘನಂ ತಪ್ಪು
ರಾಜಾಸನ್ನಿಧಿಯೊಳ್ ದಿಟಂ,
ಮಾಜದಾಡೆ ಸುಖಕ್ಕೋಜಂ
ಭಾಜನಂ ಗುರುಭೋಜನಂ ॥ ೫೪ ॥

ಎಂದು ರಾಜಧರ್ಮದಲ್ಲಿ ಹೇಳಿರುವುದು. ಊಃ, ನನ್ನಿಂದಾಗುವುದಿಲ್ಲ; ರಾಜಭಟರಿಗೆ ನೀನೇ ಏನಾದರೂ ಹೇಳಿ ಸರಿಮಾಡಿಕೊಳ್ಳಬೇಕು.

(ರಾಜಸೇವಕನೊಬ್ಬನು ಬರುವನು.)

ರಾ. ಸೇ.:—ಯಾರಪ್ಪಾ, ವಿಶ್ವಕರ್ಮಾಚಾರ‍್ರು—ವಿಶ್ವಮತ್ಯಾಚಾರ‍್ರು?

ವಿಶ್ವಮತಿ:— ನಾವೇ, ನಾವೇ, ನನ್ನ ಹೆಸರು ವಿಶ್ವಮತ್ಯಾಚಾರ‍್ರು. ಬರೆದುಕೊಳ್ಳಿ.

ರಾ. ಸೇ.:— ಬರೆದುಕೊಳ್ಳುವವರು ಬೇರೆ ಇದ್ದಾರೆ, ಮಹಾರಾಜರವರ ಅಪ್ಪಣೆಯಾಗಿದೆ, ಬನ್ನಿ. (ಹೋಗುತ್ತಿರುವನು)

ವಿಶ್ವಮತಿ:— (ರಾಜಸೇವಕನನ್ನು ಕೈಹಿಡಿದು ನಿಲ್ಲಿಸುವನು)

ರಾ. ಸೇ.:— ನನ್ನನ್ನೇಕೆ ತಡೆಯುತ್ತೀ?

ವಿಶ್ವಮತಿ:— ಒಂದು ಮಾತನ್ನು ಹೇಳಬೇಕಾಗಿದೆ. (ವಿಶ್ವಕರ್ಮನನ್ನು ನೋಡಿ) 'ನಾಲ್ಕು ನಿಂಬೆಯ ಹಣ್ಣು'—ಎಂದು ಹೇಳಲೋ?

ವಿಶ್ವಕರ್ಮ:— ನಿನ್ನಿಷ್ಟವಿದ್ದಂತೆ ಮಾಡು.

ವಿಶ್ವಮತಿ:— (ರಾಜಸೇವಕನಿಗೆ) ಇವನು ರಥಗಳನ್ನು ಮಾಡಿಕೊಂಡು ಬರಲಿಲ್ಲ. ಇದ್ದ ಸಂಗತಿ ನಿಮಗೆ ತಿಳಿಸಿಬಿಟ್ಟಿರುವೆನು. (ಕೈಸನ್ನೆಯಿಂದ ನಾಲ್ಕು ಬೆರಲನ್ನು ತೋರಿಸಿ ನಿಂಬೆಯ ಹಣ್ಣಿನ ಪ್ರಮಾಣವನ್ನು ತೋರಿಸುವನು.)

ರಾ. ಸೇ.:— ಕೆಲಸವಾದ ಮೇಲೆ ದಗ ಕೊಟ್ಟರೆ—

ವಿಶ್ವಮತಿ:— ಉಂಟೇ? ಹಾಗೆಂದಿಗೂ ತಿಳಿಯಬೇಡಿ. (ಸೇವಕನ ಕೈಯ ಮೇಲೆ ಕೈಯನ್ನು ಹೊಡೆದು ಸ್ವಲ್ಪ ಹಣವನ್ನು ಕೊಡುವನು.)

ರಾ. ಸೇ.:— ಏನೂ ಭಯವಿಲ್ಲ, ರಾಜಸಮ್ಮುಖಕ್ಕೆ ಬನ್ನಿ.

(ಹೋಗುವರು)

ಗರ್ಭಾಂಕ ೨.

ಚಂಪಾಪುರದ ರಾಜನ ಆಸ್ಥಾನ.

(ಧಾತ್ರೀವಾಹನ ಮಹಾರಾಜನೂ ಪರಿಜನರೂ ಮಂತ್ರಿಯೂ ಉಚಿತಾಸನಗಳಲ್ಲಿ ಕುಳಿತುಕೊಂಡಿರುವರು. ವಿಶ್ವಮತಿಯೂ ವಿಶ್ವಕರ್ಮನೂ ಪ್ರವೇಶಿಸುವರು. ವಿಶ್ವಕರ್ಮನು ಗಾಲಿಯನ್ನು ಹಿಡಿದುಕೊಂಡು ವಿಶ್ವಮತಿಯೊಡನೆ ರಾಜನಿಗೆ ಕೈಮುಗಿದು ನಿಲ್ಲುವನು.)

ಧಾತ್ರಿ:— (ವರ್ಧಕಿಗಳನ್ನು ನೋಡಿ) ನಿನ್ನಿನ ದಿವಸಕ್ಕೆ ನಿಮಗೆ ಕೊಟ್ಟಿದ್ದ ಆರು ತಿಂಗಳ ಅವಧಿ ಮುಗಿಯಿತು. ರಥಗಳು ಸಿದ್ಧವಾಗಿವೆಯೋ?

ವಿಶ್ವಮತಿ:— ಮಹಾಸ್ವಾಮಿ, ಅವಧರಿಸಬೇಕು. ರಾಜಾಜ್ಞೆಯಾದಂದಿನಿಂದ ಈ ವರೆಗೆ ಒಂದುಗಳಿಗೆಯು ಅವಕಾಶವೂ ಇಲ್ಲದೆ, ಹಗಲಿರುಳೂ ಅದೇ

ಕೆಲಸದಲ್ಲಿದ್ದು ಮುಗಿಸಿರುವೆನು. ಮರವು ದೊರಕುವುದು ಬಹುಪ್ರಯಾಸದಿಂದ, ಕೆಲಸಗಾರರು ಬರಿಯಮಾತಿಗೂ ದಿನಕ್ಕೆ ಕೊಡುವ ಕೂಲಿಗೂ ತೃಪ್ತರಾಗದಿದ್ದುದರಿಂದ, ಅವರನ್ನು ಬಹುವಿಧಗಳಿಂದ ಸಂತೋಷಪಡಿಸಿ ಕಾರ್ಯವನ್ನು ಪೂರ್ತಿ ಮಾಡಿರುವೆನು. ಕೆಲಸವನ್ನು ಚೆನ್ನಾಗಿ ಪರಾಮರ್ಶಿಸಿ, ಸೇವಕರ ಕಷ್ಟಕ್ಕೆ ತಕ್ಕಂತೆ ಬಹುಮಾನವನ್ನು ಮಾಡಬೇಕೆಂಬುದೇ ಈ ಸೇವಕನ ಪ್ರಾರ್ಥನೆ.

ಧಾತ್ರಿ:—(ಪರಿಜನರನ್ನು ನೋಡಿ) ರಥಗಳು ಬಂದಿವೆಯೇ? ನೀವಾರಾದರೂ ಹೋಗಿ ನೋಡಿ ಬನ್ನಿರಿ. (ಒಬ್ಬನು ಹೋಗುವನು)

ಪರಿಜನರಲ್ಲಿ ಮತ್ತೊಬ್ಬನು:—ಮಹಾಸ್ವಾಮಿ! ರಥಗಳು ಬಂದಿವೆ, ಇವರು ಇಲ್ಲಿಗೆ ಬರುವುದಕ್ಕೆ ಮುಂಚೆ ನಾನೇ ಹೋಗಿ ನೋಡಿಬಂದೆನು. ಐನೂರು ರಥಗಳು ಮಾತ್ರ ಬಂದಿವೆ.

ಧಾತ್ರಿ:—ಅವುಗಳನ್ನು ಮಾಡಿದವರಾರು?

ವಿಶ್ವಮತಿ:—ಮಹಾಸ್ವಾಮಿ, ನಾನು ನಾನು.—ವಿಶ್ವಮತ್ಯಾಚಾರ್ರ್ರು (ಪರಿಜನರ ಕಡೆಗೆ ತಿರುಗಿ) ಬರೆದು ಕೊಳ್ಳಿ.

ಧಾತ್ರಿ:— ಸರಿ, ಒಳ್ಳೆಯದು, (ವಿಶ್ವಕರ್ಮನನ್ನು ನೋಡಿ) ನೀನು ಮಾಡಿದ ರಥಗಳೆಲ್ಲಿ?

ವಿಶ್ವಕರ್ಮ:—ಮಹಾ ಸ್ವಾಮಿ, ಇದೊಂದು ರಥದ ಚಕ್ರವನ್ನು ತಂದಿರುವೆನು; ಚಿತ್ತಯಿಸಬೇಕು.

ಸೇವಕ:—(ಬಂದು) ಮಹಾಸ್ವಾಮಿ, ವಿಶ್ವಮತ್ಯಾಚಾರ್ರ ರಥಗಳು ಐನೂರು ಸರಿಯಾಗಿವೆ.

ಧಾತ್ರಿ:—ಒಳ್ಳೆಯದು. ಸಕಾಲದಲ್ಲಿ ಐನೂರು ರಥಗಳನ್ನು ನಮ್ಮ ಆಜ್ಞೆಯಂತೆ ಮಾಡಿರುವುದರಿಂದ ವಿಶ್ವಮತಿ ನಮ್ಮ ಪ್ರೀತಿಗೆ ಪಾತ್ರನಾಗಿರುವನು. [ವಿಶ್ವಕರ್ಮನನ್ನು ನೋಡಿ] ವಿಶ್ವಕರ್ಮ, ನಿನಗೆ ಇನ್ನು ಹೇಳತಕ್ಕುದೇನಿದೆ? ರಾಜಾಜ್ಞೆಯನ್ನು ಉಲ್ಲಂಘಿಸುವುದಕ್ಕೆ ಆರು ತಿಂಗಳು ಬೇಕಾಯ್ತೊ? ಆರು ತಿಂಗಳ ಅವಧಿಯಿದ್ದರೂ ಒಂದೇ ಗಾಲಿಯನ್ನು ಮಾಡಿಕೊಂಡು ಆಸ್ಥಾನಕ್ಕೆ ಬಂದು, ಹೇಳಿ ನಿಂತಿರುವುದಕ್ಕೆ ನಿನಗೆ ಸ್ವಲ್ಪವಾದರೂ ನಾಚಿಕೆಯಿಲ್ಲವೇ? ಅಥವಾ ಸೊಕ್ಕಿರಬಹುದು, ವಿಶ್ವಕರ್ಮನೆಂಬ ಹೆಸರಿರುವುದರಿಂದ ಕೆಲಸವನ್ನು ಮಾಡದೆಯೇ

ವಿಶ್ವಕರ್ಮಖ್ಯಾತಿಯನ್ನು ಪಡೆಯಬಹುದೆಂದು ಭ್ರಮಿಸಿರಬೇಕು. ಹೋಗಲಿ, ಈವರೆಗೆ ನಿನಗೆ ಮಾಡಿರುವ ಉಪಕಾರವನ್ನಾದರೂ ನೆನೆದೆಯಾ? ಛೀ, ಛೀ, ದುಷ್ಟ, ದ್ರೋಹಿ, ಕ್ರೂರ! ನಿನಗೆ ಶಾಸನವನ್ನು ಮಾಡಬೇಕಾಗಿರುವದು.

(ಪರಿಜನರನ್ನು ನೋಡಿ)

॥ ಕಂದ॥ ಅರಸನ ಬೆಸನೇನೆನ್ನದೆ
ದುರುಳಂ ತನ್ನಂಡಮನೆಗೆ ಕೇಡಂ ಬಗೆವಂ
ತಿರೆ ಅರುದಿಂಗಳ್ಗೆಗಡಂ
ವಿರಚಿಸಿದಂ ಚಕ್ರಮೊಂದನೀ ಬಡಗಿ ಗಡಂ ॥ ೫೫ ॥

ಆದುದರಿಂದ —

ಎಮ್ಮವಸರಮಂ ಲೆಕ್ಕಿಸ
ದೆಮ್ಮಾಜ್ಞೆಯನಿಂತು ಮೀರಿದೀ ದುರ್ಮತಿಯಿ
ನ್ನೆಮ್ಮಾ ನೆಲನಂ ಪುಗದ
ನ್ನಂ ಮಾಣದೆ ಅಟ್ಟಿಮಂತಕನಪುರಕೀಗಳ್ ॥ ೫೬ ॥

ವಿಶ್ವಕರ್ಮ: — (ಅಡ್ಡ ಬಿದ್ದು ಎದ್ದು ಕೈಮುಗಿದು ನಿಂತು)

॥ ಕಂದ ॥ ಕರುಣಿಪುದು ದೇವ, ಚಕ್ರಂ
ಕರಮೊಳ್ಪಿತ್ತಲ್ಲದಿರ್ದೊಡೆನ್ನಂ ಕೊಲ್ಲಿಂ
ಪರಿಕಿಸಿಮೊಮ್ಮಿರ್ಗಂಗದರಾ
ತಿರಿವಂ ಬಳಿಕಕ್ಕೆ ದೇವರೆಂದಂತೆವಲಂ ॥ ೫೭ ॥

ಧಾತ್ರಿ: — (ಕೋಪದಿಂದ)

॥ ಕಂದ ॥ ತಪ್ಪದು ತಪ್ಪದು ನುಡಿಯೆಂ
ತಪ್ಪೊಡಮೆಲೆ ಬಡಗಿ ಗಳಪದಿರ್ ಯಮಪುರಿಯೊಳ್
ಅಪ್ಪಪ್ಪೆನುತ್ತೆ ಬೆಸಕೆ
ಯ್ದೊಪ್ಪಿಸು ನೀನಲ್ಲಿ, ಸಲ್ಲದಿಲ್ಲೀ ಮಾಟಂ ॥ ೫೮ ॥

(ವಿಶ್ವಕರ್ಮನು ರಾಜಾಜ್ಞೆಯನ್ನು ಕೇಳಿದೊಡನೆ ಚಕ್ರವನ್ನು ನೆಲದಮೇಲಿಟ್ಟು ಓಡಿಹೋಗುವನು.)

ಧಾತ್ರಿ:— (ಕೋಪದಿಂದೆದ್ದು ಮುಂದೆಬರುವನು)

ಪರಿಜನರಲ್ಲೊಬ್ಬನು:— (ವಿಶ್ವಕರ್ಮನನ್ನು ಹಿಡಿಯಲು ಬರುತ್ತ ಬಳಿಯಲ್ಲಿದ್ದವರನ್ನು ನೋಡಿ)

॥ ಕಂದ ॥ ಪಿಡಿಪಿಡಿ ದುರುಳನನೋಡುವ
ಬಡಗಿಯನಾಟೆಂದು ತಿವಿದುಸೊರ್ಕಂ ಬಲ್ಪಿಂ
ಬಿಡಿಸಿರಿಮಂಜದೆ ಪೋಗೀ
ಗಡೆ ಜವದಿಂದಾ ದುರಾತ್ಮನಂ ತವೆ ಕೊಲ್ಲಿಂ ॥ ೫೯ ॥

(ಅಷ್ಟರೊಳಗೆ ಸೇವಕರಲ್ಲಿ ಒಬ್ಬನು ಆ ಗಾಲಿಯನ್ನು ಮುಟ್ಟಲು ಅದು ತಕ್ಷಣವೇ ಮೇಲಕ್ಕೆ ನೆಗೆದು ಅಂತರಿಕ್ಷದಲ್ಲಿ ಗಿರಗಿರನೆ ತಿರುಗುತ್ತಿರುವುದು.) (ಸೇವಕನು ರಾಜನ ಬಳಿಗೆ ಓಡಿಬಂದು)

ಮಹಾಸ್ವಾಮಿ! ಆಶ್ಚರ್ಯ, ಆಶ್ಚರ್ಯ.

ಧಾತ್ರಿ:— (ಆಶ್ಚರ್ಯದಿಂದಲ್ಲಿಯೇ ನಿಂತು) ಏನು, ಏನು, ಹೇಳು.

ಸೇವಕ:—

। ಕಂದ । ಮುಟ್ಟಲೊಡಂ ನಾಂ ನೆಲದೊಳ
ಗಿಟ್ಟಿರ್ದ್ದಾ ವಿಶ್ವಕರ್ಮನಿರ್ಮಿತ ಚಕ್ರಂ
ತೊಟ್ಟನೆ ನೆಗೆದಂಬರದೊಳ
ಗಿಟ್ಟಳದಿಂದಿನ್ನುಮನುವ ತಿರ್ರನೆ ತಿರಿಗುಂ ॥ ೬೦ ॥

(ಧಾತ್ರಿವಾಹನ ರಾಜನೂ ಪರಿಜನರೂ ನೋಡಿ ಬೆರಗಾಗಿ ನಿಲ್ಲುವರು)

ಮಂತ್ರಿ:— ಮಹಾರಾಜನೇ ಪರಾಮರ್ಶಿಸಬೇಕು.—

॥ ಕಂದ ॥ ಅರಸನ ಬೆಸನೇನೆನ್ನದ
ದುರಾತ್ಮ ನಿಂತಪ್ಪ ಚಕ್ರಮಂ ಮಾಡುಗುಮೇಂ
ಸುರರಾಜನಾಜ್ಞೆಗೊಲವಿಂ
ವಿರಚಿಸಿದಾ ವಿಶ್ವಕರ್ಮನಲ್ಲದೆ ಪೆರತೇಂ ॥ ೬೧ ॥

ಧಾತ್ರಿ:— (ಚಿಂತೆಗೊಂಡು)

। ಕಂದ । ಅವಿಚಾರದರಸನೆಂದೆ
ನ್ನವನಿಜನಂ ಪಳಿಗುಮುಳಿಗುಮೀನಾಡಂ ಶ

ತ್ರುವುಮೆಂತುಂ ಮೇಲಿತ್ತ
ಲ್ಕವಸರಮಾಯ್ತೆನಗ ಮಿನ್ನದಾವುದೊ ನರಕಂ ॥ ೬೦ ॥

ಮಂತ್ರಿ:— ಮಹಾರಾಜನೆ, ಅಧಿಕ ಸಂತಾಪಕ್ಕೆ ಈಗ ಎಡೆಗುಡುವುದು ಸರಿಯಲ್ಲ. ಸಾವಧಾನ ಚಿತ್ತನಾಗಬೇಕು. ಪ್ರಜೆಗಳಲ್ಲಿ ಧೃಢವಾದ ದೇಶಭಕ್ತಿಯೂ ರಾಜಭಕ್ತಿಯೂ ನೆಲಸಿರುವುದರಿಂದ ಅವರು ಸರ್ವಪ್ರಯತ್ನದಿಂದ ತಮ್ಮ ಸಾಮರ್ಥ್ಯವನ್ನು ದೇಶಸೇವೆಯಲ್ಲಿಯೂ ರಾಜಸೇವೆಯಲ್ಲಿಯೂ ವಿನಿಯೋಗಿಸುವರು. ಅಂತಹ ಪ್ರಜೆಗಳಾರಾರೆಂದು ಅರಸನಾದವನು ಚೆನ್ನಾಗಿ ಪರೀಕ್ಷಿಸಿ ಸ್ವಾನುಭವದಿಂದ ತಿಳಿಯಬೇಕಲ್ಲದೆ ಅವರಿವರ ಚಾಡಿಯ ಮಾತುಗಳನ್ನು ಕೇಳಿ, ನಿರಪರಾಧಿಗಳಾಗಿಯೂ ದೇಶಭಕ್ತಶಿರೋಮಣಿಗಳಾಗಿಯೂ ರಾಜಸೇವಾತತ್ಪರರಾಗಿಯೂ ಇರುವವರನ್ನು ಲಾಘವದಿಂದೇಳಿಸಿ, ಅವರ ಬಿನ್ನಪವನ್ನವಧರಿಸದೆ, ಅವರ ಹಿತಸೂಚನೆಗಳನ್ನು ಸೂಚಿಯಂತೆ ಕಳೆದು, ಪಿಸುಣರ ಮಾತುಗಳಲ್ಲಿ ವಿಶ್ವಾಸವನ್ನಿಟ್ಟು ಮಹನೀಯರನ್ನು ಕ್ರೂರಶಿಕ್ಷೆಗಳಿಗೆ ಗುರಿಮಾಡುವುದು ರಾಜಧರ್ಮಕ್ಕೆ ವಿರುದ್ಧವಾದುದು. ಹಾಗೆ ಮಾಡುವುದರಿಂದ ಅಂತಹ ಮಹನೀಯರಿಗೆ ರಾಜಸೇವೆ, ದೇಶಸೇವೆಗಳಲ್ಲಿರುವ ಉತ್ಸಾಹಕ್ಕೆ ಭಂಗವನ್ನುಂಟುಮಾಡಿದಂತಾಗುವುದು. ಪ್ರಜೆಗಳು ನಿರುತ್ಸಾಹಿಗಳಾದರೆ ರಾಜಕಾರ್ಯವೇನಾಗುವುದು? ರಾಜಭಕ್ತಿ ಸಂಪೂರ್ಣವಾಗಿರುವ ಮಹನೀಯರಲ್ಲಿ ಒಂದೆರಡು ದೋಷಗಳಿದ್ದರೂ ಅವು ಚಂದ್ರನಲ್ಲಿರುವ ಕರೆಯಂತೆ ನಿಂದ್ಯಗಳೆಂದು ಹೇಳಲಾಗದು.

ಧಾತ್ರಿ:— ಆದುದು ಆಗಿಯೇ ಹೋಯಿತು. ಈಗ ಮಾಡಬೇಕಾದುದೇನಾದರೂ ಇದ್ದರೆ ಹೇಳು.

ಮಂತ್ರಿ:— ಈಗ ಅವಿಚಾರದಿಂದ ವಿಶ್ವಕರ್ಮನ ಸಾಮರ್ಥ್ಯವನ್ನರಿಯದೆ ಅವನು ನಿರ್ಮಿಸಿದ ಚಕ್ರದ ಮಹಿಮೆಯನ್ನು ತಿಳಿಯದೆ ಅವನಿಗೆ ಮರಣಶಾಸನವನ್ನು ವಿಧಿಸಿದುದರಿಂದ ಅವನು ಓಡಿಹೋದನು. ಅವನ ಗತಿಯೇನಾಯ್ತೋ? ಸತ್ತನೋ? ಬದುಕಿರುವನೋ? ಶತ್ರುಪಕ್ಷಕ್ಕೆ ಸೇರಿರುವನೋ? ವಿರಕ್ತನಾಗಿರು

ವನೋ? ಎಂಬೀ ವಿಚಾರವೇ ಅಲ್ಲದೆ, ಮುಂದೆ ನಮ್ಮ ದೇಶದ ಕ್ಷೇಮಾಭಿವೃದ್ಧಿಯನ್ನು ಚಿಂತಿಸಬೇಕು. 'ಗತಂ ನ ಶೋಚಯೇತ್ ಪ್ರಾಜ್ಞಃ' ಎಂದಿರುವುದರಿಂದ ನಡೆದುಹೋದುದು ಹೋಗಲಿ; ಇನ್ನು ಕರ್ತವ್ಯವಾವುದೆಂದು ಆಲೋಚಿಸಬೇಕು.

ಧಾತ್ರಿ:— ಹಾಗೆಯೇ ಆಗಲಿ. ಒಂದುವೇಳೆ ವಿಶ್ವಕರ್ಮನು ಬದುಕಿದ್ದರೆ ಈ ಲೋಕದಲ್ಲಿ ಎಲ್ಲಿದ್ದರೂ ಸರಿ, ಅವನನ್ನು ಹುಡುಕಿ ಕರೆದುಕೊಂಡು ಬರಲು ಚಾರರನ್ನು ಕಳುಹು.

ಮಂತ್ರಿ:— ಹಾಗೆಯೇ ಆಗಲಿ. (ಇಬ್ಬರೂ ಹೊರಡುವರು.)

ಗರ್ಭಾಂಕ ೩.

ಚಂಪಾಪುರದ ಅರಮನೆ.

(ಧಾತ್ರಿವಾಹನರಾಜನೂ ಮಂತ್ರಿಯೂ ಉಚಿತಾಸನಗಳಲ್ಲಿ ಕುಳಿತಿರುವರು)

ಧಾತ್ರಿ:— ಸಚಿವನೆ! ಹೆಣ್ಣುಮಕ್ಕಳನ್ನು ಹೆತ್ತವರಿಗೆ ನಾನಾವಿಧವಾದ ಕಷ್ಟಗಳು ಬರುವುವು.

ಮಂತ್ರಿ:— ಮಹಾರಾಜರಿಗೆ ಹೆಣ್ಣುಮಕ್ಕಳು ಹುಟ್ಟಿದರೆ ಕಷ್ಟವೇನು? ಬಡವರಿಗಾದರೆ ಕಷ್ಟವೆನ್ನಬಹುದು. ಮೊದಲಲ್ಲಿ ಬಡವರ ಕಷ್ಟಗಳನ್ನು ತಿಳಿದಲ್ಲದೆ ಭಾಗ್ಯವಂತರ ಕಷ್ಟಗಳು ಹೀಗೆಂದು ಹೇಳುವುದಕ್ಕಾಗುವುದಿಲ್ಲ.

ಧಾತ್ರಿ:— ಬಡವರಿಗೆ ಕಷ್ಟಗಳೇನೇನೆಂದು ನಿನಗೆ ತಿಳಿದುದು ಹೇಗೆ? ನಮ್ಮೀ ರಾಜ್ಯದಲ್ಲಿ ಪ್ರಧಾನಮಂತ್ರಿಯಾದ ನಿನಗೆ ಬಡತನವೇಕೆ ಗೊತ್ತಾಗಬೇಕು?

ಮಂತ್ರಿ:— ಮಹಾರಾಜನೆ! ಹಾಗಲ್ಲ, ಪ್ರಜಾಪರಿಪಾಲನಾಶೀಲನಾದ ಮಹಾರಾಜನಿಗೆ ಬಡವರ ಕ್ಷೇಮವನ್ನು ನೋಡುವುದೇ ಮುಖ್ಯ ಕರ್ತವ್ಯವಾದುದರಿಂದ ಅಂತಹ ಮಹಾರಾಜನಿಗೆ ಈ ಸೇವಕನು ಮಂತ್ರಿಯಾಗಿರುವುದರಿಂದ ಅನೇಕ ವಿಧದಿಂದ ಬಡವರ ಕಷ್ಟಗಳೆಲ್ಲವನ್ನೂ ತಿಳಿದಿರುವೆನು. ಬಡವರು ಹೆಣ್ಣು ಮಕ್ಕಳನ್ನು ಹೆತ್ತಂದಿನಿಂದ ಸಾಯುವವರೆಗೂ ಕಷ್ಟಪಡುತ್ತಿರುವರಲ್ಲದೆ ಅವರಿಗೆ ಸುಖಲೇಶವೂ ಇಲ್ಲವೆಂದು ತಿಳಿಯಬೇಕು. ಇನ್ನು ಮಹಾರಾಜರಿಗೆ ಕಷ್ಟವೇನು?

ರಾಜ:— ರಾಜರ ಕಷ್ಟವೇ? ಕೇಳು—

॥ ಕಂದ ॥ ಮಗಳೊರ್ವಳೊಗೆಯೆ ಕುಲದೊಳ
ಗೊಗೆಗುಂ ಜಾನಕಿಗೆ ಯಾಜ್ಞಸೇನಿಗೆ ಮೇಣ್ ಗಂ
ಗೆಗೆ ಕೊಂತಿಗೆ ಬಂದೆಡರ್ಗಳ್
ಬಗೆಯದೆ ಸಿರಿಯೊಡೆಯರಾದೊಡಂ ಪೆತ್ತವರ್ಗಳ್ ॥ ೭೩ ।

ಮಂತ್ರಿ— ಅವರಿಗಾಗಿ ಚಿಂತಿಸುವ ಕಾರಣವಿಲ್ಲ. ಏಕೆಂದರೆ,—

॥ ಕಂದ ॥ ಇನಿತೇಕವರೆಡರ್ಗಳನವ
ರನುಭವಿಸಿದರವರ ಮುನ್ನೆಮಾಡಿದ ಕರ್ಮ
ಕ್ಕನುಗುಣಮಾಗಿಯೆ ಫಲಮಂ
ತಿನಲೊಗೆದರ್ ಕರ್ಮಭೂಮಿಯೊಳ್ ಭುವನಪತೀ। ೭೪॥

ಧಾತ್ರಿ:— ಸರಿ, ಧರ್ಮಶ್ರವಣವು ಮತ್ತೊಂದುದಿನಕ್ಕಾಗಬಹುದು. ನನಗೆ ಅಭಯಮತಿಯೆಂಬ ಮಗಳಿರುವ ಸಂಗತಿ, ಗುರುದತ್ತರಾಯನಿಗೆ ಹೇಗೆ ತಿಳಿಯಿತು? ಹಸ್ತಿನಾಪುರವೆಲ್ಲಿ? ಚಂಪಾಪುರದಲ್ಲಿ ನಮ್ಮ ಅಂತಃಪುರದೊಳಗೆ ಕನ್ನೆಮಾಡದಲ್ಲಿರುವ ಅಭಯಮತಿಯೆಲ್ಲಿ? ಕಿಂಕೇನ ಸಂಗತವಾಗಿದೆಯಲ್ಲ?

ಮಂತ್ರಿ:— ಮಹಾರಾಜನೆ, ಸ್ವಲ್ಪ ಆಲೋಚನೆ ಮಾಡಿದರೆ ಎಲ್ಲವೂ ವ್ಯಕ್ತವಾಗುವುದು.

ಧಾತ್ರಿ:— ನಿನಗೆ ಹೇಗೆ ವ್ಯಕ್ತವಾಯಿತು, ಹೇಳು.

ಮಂತ್ರಿ:— ಹಸ್ತಿನಾಪುರದಿಂದ ಬಂದಿದ್ದ ಹೆಗ್ಗಡೆಗಳನ್ನು ರಹಸ್ಯವಾಗಿ ನಾನು ಕೇಳಿದೆನು.

ಧಾತ್ರಿ:— ಏನೆಂದು?

ಮಂತ್ರಿ:— "ನಿಮ್ಮ ಗುರುದತ್ತರಾಯರಿಗೆ ಅಭಯಮತಿಕುಮಾರಿಯ ವೃತ್ತಾಂತವನ್ನು ತಿಳಿಸಿದವರಾರೆಂದು?"

ಧಾತ್ರಿ:— ಅವರೇನೆಂದು ಹೇಳಿದರು?

ಮಂತ್ರಿ:— ಒಬ್ಬ ಹರದನೆಂದು ಹೇಳಿದರು.

ಧಾತ್ರಿ:— ನನಗೆ ಇನ್ನೂ ವ್ಯಕ್ತವಾಗಲಿಲ್ಲ.

ಮಂತ್ರಿ:— ಹರದನೊಬ್ಬನು ದೇಶಸಂಚಾರವನ್ನು ಮಾಡುತ್ತ ತಾನು ಹೋದ ಕಡೆಗಳಲ್ಲಿರುವ ಚಿತ್ರವಿಚಿತ್ರವಾದ ಪದಾರ್ಥಗಳನ್ನೂ ವಿಶೇಷವರ್ತಮಾನಗಳನ್ನೂ ಅಲ್ಲಲ್ಲಿ ತಿಳಿಸಿ ಒಂದು ದೇಶದ ಸರಕನ್ನು ಮತ್ತೊಂದು ದೇಶಕ್ಕೆ ಒಯ್ಯುವಂತೆ ಅಭಯಮತಿಕುಮಾರಿಯ ವೃತ್ತಾಂತವನ್ನೂ ಚಿತ್ರಪಟವನ್ನೂ ಒಯ್ದು ಗುರುದತ್ತರಾಯನಿಗೆ ಕೊಟ್ಟಿರಬೇಕೆಂದು ತಿಳಿಯಲಾಯಿತೇ?

ಧಾತ್ರಿ:— ಈಗ ತಿಳಿಯಲಾಯಿತು.

(ಸೇವಕನೊಬ್ಬನು ಬರುವನು)

ಸೇವಕ:— (ಕೈಮುಗಿದು) ಮಹಾಸ್ವಾಮಿ, ವಿಶ್ವಕರ್ಮನನ್ನು ಹುಡುಕಿಕೊಂಡು ಹೋದವರು ಬಂದಿರುವರು.

ಧಾತ್ರಿ:— ಬೇಗನೆ ಕರೆದುಕೊಂಡು ಬಾ.

(ಸೇವಕನು ಹೋಗುವನು. ಚಾರರಿಬ್ಬರು ಬರುವರು.)

ಧಾತ್ರಿ:— (ಮಂತ್ರಿಯನ್ನು ನೋಡಿ) ಇವರು ವಿಶ್ವಕರ್ಮನನ್ನೇಕೆ ಕರೆತರಲಿಲ್ಲ?

ಮಂತ್ರಿ:— (ಚಾರರನ್ನು ನೋಡಿ) ವಿಶ್ವಕರ್ಮನ ಸುದ್ದಿಯನ್ನು ನಿಮಗೆ ತಿಳಿದಷ್ಟು ಹೇಳಿ.

೧ನೆಯ ಚಾರ:— ಮಹಾಸ್ವಾಮಿ, ಮರಣವಾರ್ತೆಯನ್ನು ಕೇಳಿದೊಡನೆ ವಿಶ್ವಕರ್ಮನು ಚಕ್ರವನ್ನು ಬಿಟ್ಟು ಓಡಿಹೋದನಷ್ಟೆ? ಹಸ್ತಿನಾವತಿಯಲ್ಲಿ ಗುರುದತ್ತರಾಯನನ್ನು ಕಂಡು ತನ್ನ ವೃತ್ತಾಂತವೆಲ್ಲವನ್ನೂ ಹೇಳಿ, ಅಲ್ಲಿ ರಾಜನ ಪ್ರೀತಿಗೆ ಪಾತ್ರನಾಗಿರುವನು.

ಧಾತ್ರಿ:— ವಿಶ್ವಕರ್ಮನು ಇರುವ ಸ್ಥಳವನ್ನು ತಿಳಿದೂ ನೀವು ಕರೆದುಕೊಂಡುಬಾರದೆ, ಏಕೆ ಬಿಟ್ಟುಬಂದಿರಿ?

೨ನೆಯ ಚಾರ:— ಪ್ರಧಾನಿಗಳ ಅಪ್ಪಣೆಯಪ್ರಕಾರ ಗುರುದತ್ತರಾಯನಲ್ಲಿಗೆ ಹೋಗಿ ವಿಶ್ವಕರ್ಮನನ್ನು ಹೇಗಾದರೂ ಕಳುಹಬೇಕೆಂದು ಕೇಳಿಕೊಂಡೆವು.

ಕೊನೆಗೆ ಚಂಪಾಪುರಾಧೀಶ್ವರನಾದ ಧಾತ್ರಿವಾಹನ ಮಹಾರಾಜನ ದೇಶದಿಂದ ಬಂದೆವೆಂದೂ ನಮ್ಮ ಮಹಾರಾಜನ ಕೋರಿಕೆಯೆಂದೂ ತಿಳಿಸಿದೆವು.

ಧಾತ್ರಿ:— ಆಮೇಲೆ?

೧ನೆಯ ಚಾರ:— ಮರೆಹೊಕ್ಕವರನ್ನು ಕೈಬಿಡುವುದು ರಾಜಧರ್ಮಕ್ಕೆ ವಿರುದ್ಧವಾದುದರಿಂದ ವಿಶ್ವಕರ್ಮನೊಡನೆ ತಾನೂ ಬರುವೆನೆಂದು ಹೇಳಿದನು.

ಧಾತ್ರಿ:— ಹಾಗಾದರೆ ವಿಶ್ವಕರ್ಮನನ್ನು ನಮ್ಮ ವಶಕ್ಕೆ ಕೊಟ್ಟು ಅಭಯಮತಿಯನ್ನು ತನ್ನ ವಶಕ್ಕೆ ಕೊಡಬೇಕೆಂದು ಕೇಳುವುದಕ್ಕೆ ಬರುವನಲ್ಲವೇ?

ಮಂತ್ರಿ:— (ಚಾರರನ್ನು ಕೈಸನ್ನೆಯಿಂದ ಕಳುಹಿ, ಮಹಾರಾಜನನ್ನು ಕುರಿತು) ಹಾಗಿರಲಾರದು; ಸೇನಾಸಮೇತನಾಗಿ ಬಂದು ಯುದ್ಧವನ್ನು ಮಾಡಿ—

(ತೆರೆಯೊಳಗೆ)

|| ಕಂದ || ಗುರುದತ್ತನೃಪಂ ಚಂಪಾ
ಪುರಮಂ ಮೂವಳಸು ವಳಸಿ ಮುತ್ತಿರ್ಪಂ ಸಂ
ಗರಸಿಂಹರ್ ಸಮರಧುರಂ
ಧರರಾಹವಮಲ್ಲರಣ್ಮರಿನ್ನಿದುವೆ ಪದಂ || ೬೫ ||

ಧಾತ್ರಿ:— (ರೋಷದಿಂದೆದ್ದು) ಏನು— ಏನು?

|| ಕಂದ || ಸೊಕ್ಕಿರ್ಪಂದಣುಗಿಯ ನಟ್ಟಿಂ
ದಿಕ್ಕರ್ಗಳದಂತಿರ್ಪ ಬಡಗಿಯುಂ ಮರೆವೊಕ್ಕಿಂ
ದುಕ್ಕಿರ್ಪಂ ಪೊಳಲಂ ಮುತ್ತಿದ
ಮರ್ಕಟಮುಂ ಮಾಣದಿಕ್ಕಿಡೊಕ್ಕರಿಸಿದಪೆಂ || ೬೬ ||

(ಸೇವಕನೊಬ್ಬನು ಬರುವನು.)

ಸೇವಕ:— (ಕೈಮುಗಿದು) ಮಹಾಸ್ವಾಮಿ, ಹಸ್ತಿನಾಪುರದಿಂದ ದೂತನು ಬಂದು ಸಮಯವನ್ನು ನಿರೀಕ್ಷಿಸುತ್ತಿರುವನು.

ಮಂತ್ರಿ:— ಬರಹೇಳು. (ಸೇವಕನು ಹೋಗುವನು)

(ದೂತನು ಬಂದು ಕೈಮುಗಿದು ನಿಲ್ಲುವನು.)

ಮಂತ್ರಿ:— ಎಲೈ, ನೀನಾರ ದೂತನು? ಇಲ್ಲಿಗೇಕೆ ಬಂದೆ?

ದೂತ:— ಕುರುರಾಜಾಂಗಣ ವಿಷಯದ ಹಸ್ತಿನಾಪುರಮನಾಳ್ವ ಗುರುದತ್ತ ಮಹಾರಾಜನ ದೂತನು ನಾನು. ಮಹಾರಾಜರವರು ಚಂಪಾಪುರದರಸರಾದ ಧಾತ್ರಿವಾಹನ ಮಹಾರಾಜರಿಗೆ ಈ ಪತ್ರವನ್ನು ಕೊಡಬೇಕೆಂದು ನನ್ನನ್ನು ಕಳುಹಿರುವರು. (ಪತ್ರವನ್ನು ತೆಗೆದು ಕೊಡ ಬರುವನು)

ಧಾತ್ರಿ:— (ಪತ್ರವನ್ನು ತೆಗೆದುಕೊಂಡು ಮಂತ್ರಿಯ ಕೈಗೆ ಕೊಡುವನು.)

ಮಂತ್ರಿ:— (ನೋಡಿ) ನೀನೇ ಓದು (ಎಂಥು ದೂತನ ಕೈಗೆ ಕೊಡುವನು)

ದೂತ:—(ಓದುವನು.)

|| ಕಂದ || ನಿಟ್ಟಿಸಿದೊಡನಿದನೆಳೆಯುಳ
ನೊಟ್ಟಜೆವೆರಸೀವುದೀಯದಿರ್ದೊಡೆ ತನ್ನಂ
ಅಟ್ಟಿಯೆ ವರಿಸುವ ಗಂಡೀ
ಘಟ್ಟದೆ ಪೋ ಗಂಡನಲ್ಲಿ ನಾನರವರಿಸಲ್ || ೬೭ ||

ರಾಜ:— (ದರ್ಪದಿಂದ ನಕ್ಕು)

|| ಕಂದ || ಒಡೆಯನ ನುಡಿಯಂ ತಪ್ಪದೆ
ನುಡಿದಾದೂತಂಗೆ ಮುಳಿದು ನಾಲಗೆಯಂ ಸೀ
ಳ್ದೊಡೆ ರಾಜನೀತಿ ಕಿಡುಗುಂ
ತಡೆಯದೆ ನಿಮ್ಮರಸನಲ್ಲಿಗೀಗಳೆ ನಡೆ ನೀಂ || ೬೮ ||

(ದೂತನು ಹೋಗುವನು)

(ತೆರೆಯಲ್ಲಿ ರಣಭೇರಿಯ ಧ್ವನಿ.)

ಮಂತ್ರಿ:— ಮಹಾರಾಜನೇ! ನಮ್ಮ ಸಮರಸಿಂಹನು ಯುದ್ಧಸನ್ನಾಹಗಳನ್ನು ಮಾಡಿಕೊಂಡು ಹೊರಟಂತೆ ತೋರುವುದು.

ಧಾತ್ರಿ:— ನಡೆ, ನಾವೂ ಹೋಗಿ ಕಾಲೋಚಿತ ಕಾರ್ಯವನ್ನು ಮಾಡುವ.

(ಹೋಗುವರು.)

ಗರ್ಭಾಂಕ ೪.

ರಣರಂಗದ ಮುಂಭಾಗ.

(ಧಾತ್ರಿವಾಹನರಾಜನು ಪ್ರವೇಶಿಸುವನು)

ಧಾತ್ರಿ:—(ದೃಷ್ಟಿಸಿ ನೋಡಿ) ಯುದ್ಧವು ಬಲವಾಗುತ್ತಿರುವುದು. ಕಾಲಾಳು ಗಳು ರೋಷಾವೇಶದಿಂದ ಹೊಡೆದಾಡುತ್ತಿರುವರು. ನಮ್ಮ ಸೇನಾಪತಿ ಸಮರಸಿಂಹನು ತುಂಬಾ ಜಾಗರೂಕನಾಗಿ ಶತ್ರುಸೈನ್ಯವನ್ನು ನಾಶಗೊಳಿಸುತ್ತಿರು ವನು. ಈ ವೇಳೆಯಲ್ಲಿ ನಾನಿಲ್ಲಿ ನಿಂತು ನೋಡುತ್ತಿರುವುದು ಸರಿಯಲ್ಲ. ನಾನೂ ಹೋಗಿ ನಮ್ಮ ಸೈನಿಕರಿಗೆ ಪ್ರೋತ್ಸಾಹವನ್ನು ಕೊಡುವೆನು. [ಹೋಗುವನು.]

(ಹಸ್ತಿನಾಪುರದ ಭಟನೊಬ್ಬನೂ ಚಂಪಾಪುರದ ಭಟನೊಬ್ಬನೂ ಬರುವರು.)

ಹಸ್ತಿನಾಪುರದ ಭಟ:— ಒಳ್ಳೆ ಯುದ್ಧ ಬಂತಪ್ಪ. ಮಾರಾಯ, ಯಾ ವಾಗಲೂ ಯುದ್ಧವೇ ಇರಲಿ, ದೇವರೇ ಎಂದು ಕೈಮುಗಿಯುತ್ತೇನೆ.

ಚಂಪಾಪುರದ ಭಟ:— ಯಾಕಪ್ಪಾ? ಯುದ್ಧದಲ್ಲಿ ಸತ್ತುಹೋಗುವು ದಕ್ಕೋ?

ಹ. ಭಟ:— ನಾನೂ ನೀನೂ ಎಂದಿದ್ದರೂ ಒಂದು ದಿನ ಸಾಯಲೇ ಬೇಕು. ಯುದ್ಧದಿಂದ ಬಹಳ ಆದಾಯವುಂಟು.

ಚಂ. ಭಟ:— ಏನೇನು ಹೇಳು.

ಹ. ಭಟ:— ನೋಡೀಗ, ನನಗೆ ಯುದ್ಧಕ್ಕೆ ಮುಂಚೆ ಹಿಟ್ಟಿಗೆ ಗತಿಯಿರ ಲಿಲ್ಲ; ಮನೆಯಲ್ಲಿ ಅವಳೂ ಹುಡುಗರೂ ನಾನೂ ಸೇರಿ ಕೂಲಿ ಮಾಡಿದರೂ ನಮಗೆ ಒಪ್ಪೊತ್ತಿಗೆ ಸಾಕಾಗುತ್ತಿರಲಿಲ್ಲ. ಈಗ ನೋಡು, ಮನೆಯಲ್ಲಿ ಬೇಕಾ ದಷ್ಟು ಹಣವನ್ನು ಕೊಟ್ಟು ಬಂದೆ; ನನಗೆ ಇಲ್ಲಿ ಕೇಳಿದಷ್ಟು ತಿಂಡಿ; ಎರಡೆರಡು ಭರಣಿಯ ಮಾಂಸ, ಒಂದು ಕಟ್ಟು ಹೊಗೆಬತ್ತಿ; ಕುಡಿತಬೇಕಾದಷ್ಟು; ನನ್ನ ವೇಷವನ್ನು ನೋಡು ಹೇಗಿದೆ? ಎಂಥ ಅಂಗರೇಖೆ, ಎಂಥ ಜೋಡು, ಎಂಥ ಟೊಪ್ಪಿಗೆ; ದೊಡ್ಡ ಉದ್ಯೋಗಸ್ಥರಿಗೆ ಕೂಡ ಇಂಥಾದ್ದಿಲ್ಲ. ಎಲ್ಲಿಗೆ ಬೇಕಾದರೂ ಹೋಗಬಹುದು. ನಮ್ಮನ್ನು ತಡೆಯುವರು ಯಾರು?

(ಬತ್ತಿಯನ್ನು ಸೇದುವನು; ಚಂಪಾಪುರದವನಿಗೂ ಕೊಡುವನು)

ಚಂ. ಭಟ:—ಇದೆಲ್ಲಾ ಸರಿ. ನಿಮ್ಮ ಗಂಡಸುತನ ಹಾಗಿರಲಿ, ಎದುರಲ್ಲಿ ನಿಂತು ಯುದ್ಧಮಾಡದೆ ಮರೆಯಾಗಿ ಅವಿತುಕೊಂಡಿದ್ದು ಕೊಲ್ಲುವುದೇಕೆ—ನೀವು?

ಹ. ಭಟ:—ಈಗಿನ ಕಾಲದಲ್ಲಿ ಎದುರಲ್ಲಿ ಕಾಳಗಕ್ಕೆ ನಿಲ್ಲಬಾರದೆಂದು ರಾಜನಾಜ್ಞೆ.

ಚಂ. ಭಟ:—ಕುಡಿಯುವ ನೀರಿಗೆ ಏಕೆ ವಿಷವನ್ನು ಹಾಕುವಿರಿ?

ಹ. ಭಟ:—ಕುಡಿದವರು ಸಾಯಬೇಕೆಂದೇ ಹಾಗೆ ಮಾಡುತ್ತೇವೆ.

ಚಂ. ಭಟ:—ವಿಮಾನಗಳನ್ನು ಮಾಡುವುದಕ್ಕೆ ಹೇಗೆ ಕಲ್ತುಕೊಂಡಿರಿ?

ಹ. ಭಟ:—ನಮಗೆ ಈಗ ಎಲ್ಲಾ ವಿದ್ಯೆಗಳೂ ವಶವಾಗಿವೆ.

ಚಂ. ಭಟ:—ಜನರನ್ನು ಹಿಂಸಿಸಿ ಲೋಕನಾಶವನ್ನು ಮಾಡುವ ವಿದ್ಯೆಗಳೇ, ಅಲ್ಲವೇ?

ಹ. ಭಟ:—ಹಾಗೆನ್ನಬೇಡ, ಲೋಕಕ್ಕೆ ಉಪಕಾರವನ್ನು ಮಾಡುವ ವಿದ್ಯೆಗಳೂ ನಮಗೆ ವಶವಾಗಿವೆ. ಅಂಥ ವಿದ್ಯೆಗಳನ್ನು ಸ್ವಕಾರ್ಯಕ್ಕೆ ಉಪಯೋಗಿಸಿಕೊಂಡರೂ ಇತರ ಜನರಿಗೆ ತಿಳಿದುಹೋಗುವುದೆಂದೂ ಅದನ್ನು ಸಮಯ ಬಂದಾಗ ಉಪಯೋಗಿಸಬೇಕೆಂದೂ ಈಗ ಸುಮ್ಮನಿರುವೆವು

ಚಂ. ಭಟ:—ಸತ್ತವರನ್ನು ಬದುಕಿಸಬಲ್ಲಿರಾ?

ಹ. ಭಟ.—ಉಃ, ಬದುಕಿರುವವರನ್ನು ನೋವಿಲ್ಲದಂತೆ ಸಾಯಿಸಬಲ್ಲೆವು.

ಚಂ. ಭಟ:—ನೀವು ಮುಂದಕ್ಕೆ ನರಕದಲ್ಲಿ ಅನೇಕ ಸಾಗರೋಪಮ ವರ್ಷಗಳು ಇರಬೇಕಾಗುವುದು.

ಹ. ಭಟ:—ನೀನು ಮಹಾ ಧರ್ಮಿಷ್ಠ! ಕಟ್ಟೋ, ನಿನ್ನ ಪುರಾಣದ ಧರ್ಮವನ್ನು.

ಚಂ. ಭಟ:—ಪುರಾಣದ ರಾಕ್ಷಸರೇ ನೀವು. ನಿಮ್ಮ ನಡತೆಗಳೂ ಅವರಿಗೆ ತಿಳಿದಿರಲಿಲ್ಲ. ನಾಳೆ ನೀವು ಹೋಗುವ ನರಕದಲ್ಲಿ ಅವರಿಗೆ ನೀವು ಗುರುಗಳಾಗಿರುವುದು ಸರಿ.

ಹ. ಭಟ:—ಬಾರಣ್ಣ, ನಮಗೇಕೆ ಈ ಹೊಡೆದಾಟ! [ಬತ್ತಿಯನ್ನು ಸೇದುತ್ತ ಹೋಗುವರು]

(ಧಾತ್ರಿವಾಹನು ಬರುವನು)

ಧಾತ್ರಿ:—(ಸುತ್ತಲೂ ನೋಡಿ ಗಾಬರಿಯಿಂದ) ಅದಾರು ಓಡಿಬರುತ್ತಿರುವವರು?

ಸೇವಕ:—(ಓಡಿಬಂದು ಒಂದು ಓಲೆಯನ್ನು ಕೊಡುವನು)

ಧಾತ್ರಿ:—(ಅವಸರದಿಂದ ಓದಿ) ಹಾ, ಬ್ರಹ್ಮೇಂದ್ರದತ್ತ! ನಿನ್ನ ಹಣೆಯಲ್ಲಿ ವಿಧಿ ಹೀಗೆ ಬರೆದಿದ್ದನೇ? ನಾನೊಂದು ಮಾಡಬೇಕೆಂದಿದ್ದರೆ ವಿಧಿ ಮತ್ತೊಂದನ್ನು ಮಾಡಿತೇ? **"ದೈವೀವಿಚಿತ್ರಾಗತಿಃ"** ಎಂಬುದು ನಿಜ. ಆಹಾ, ಅಭಯಮತಿ ಕುಮಾರಿ ಈ ಪತ್ರವನ್ನು ಬರೆದಂದು ಸ್ವಲ್ಪವಾದರೂ ಶೋಕಿಸದೆ ಇದ್ದಹಾಗೆ ಕಾಣುವುದು. ಅದರಿಂದಲ್ಲವೇ ಅವಳಿಗೆ ಅಭಯಮತಿ ಎಂದು ಹೆಸರು. ಏನು ಬರೆದಿರುವಳು? (ಓದುವನು)

‖ ಕಂದ ‖ ಕಡಿವಡೆದು ಕೆಡೆಯೆ ಕುವರಂ
ಗಿಡಗಂ ತಂದತ್ತು ಕನ್ನೆವಾಡಕೆ ಕೈಯಂ
ತಡೆಯದೆ ಗುರುದತ್ತಂಗೀ
ಗಡೆಕುಡುವುದು ಮಾಣ್ಬುದಮ್ಮ ನೀಂ ಕಾಳೆಗಮಂ ‖ ೧೯ ‖

(ಸ್ವಲ್ಪಹೊತ್ತು ಆಲೋಚಿಸುತ್ತಿದ್ದು ಬಳಿಕ ಸೇವಕನನ್ನು ಬಳಿಗೆ ಕರೆಯುವನು ಸೇವಕನು ಬಂದು ನಿಲ್ಲುವನು. ಧಾತ್ರಿವಾಹನು ಸೇವಕನ ಕಿವಿಯಲ್ಲಿ ಏನನ್ನೋ ಹೇಳಿ ಕಳುಹುವನು)

ಧಾತ್ರಿ:—(ವಿಸ್ಮಯದಿಂದ)

‖ ಕಂದ ‖ ಇಂದಿನ ಕಾಳೆಗದಂದದೊ
ಳೆಂದುಂ ಬಿಸವಂದಮುಕ್ಕೆ ಮಂಗಳವರೆಗಳ್
ಸಂದಣಿಸಿ ಮೊಳಗುಗಾವಿಧಿ
ಯೆಂದಿಂಗೆಂತಾರನಾರ್ಗೆ ಗಂಟಿಕ್ಕುವನೋ? ‖ ೨೦ ‖
ತಕ್ಕಂ ಕನ್ನೆಗೆ ವರನೆಂ
ದುಕ್ಕೆವಮಂ ಮನದೊಳೆಯ್ದೆ ಮಾಡಿದೆನಿಂ ಲೋ
ಕಕ್ಕುಕ್ಕೆವಮಂ ಮಾಡಲ್
ತಕ್ಕರ ಪೇಳ್ದಂದದಿಂದಮಾಚರಿಸಿದಪೆಂ ‖ ೨೧ ‖

ಇನ್ನು ಮುಂದಿನ ಕೆಲಸವನ್ನು ಮಾಡಲು ಏರ್ಪಡಿಸಬೇಕು. [ಹೋಗುವನು]

(ತೆರೆಯಲ್ಲಿ)

|| ಕಂದ || ನಿಲ್ಲಿಸಿಮಿಾಗಳೆ ಕದನವ
ನೆಲ್ಲರುಮೆಮ್ಮಭಯಮತಿಗಮಿಭಪುರಪತಿಗಂ
ಉಲ್ಲಾಸದ ವೈವಾಹ
ಕ್ಕೆಲ್ಲರು ಮೆಯ್ತುರ್ಪುದಾಪ್ತವರ್ಗಸಮೇತಂ || ೭೧ ||

(ರಣದ ಕಳಕಳವು ನಿಲ್ಲುವುದು)

(ಮಂಗಳವಾದ್ಯ)

(ತೆರೆಯಲ್ಲಿ) ಸ್ವಸ್ತಿ || ಹಸ್ತಿನಾಪುರವರಾಧೀಶ್ವರನಾದ, ವಿಜಯದತ್ತ ಮಹಾರಾಜನಕುಮಾರನಾದ, ಗುರುದತ್ತ ಮಹಾರಾಜಂಗೆ ಚಂಪಾಪುರವನಾಳ್ವ ಧಾತ್ರಿವಾಹನ ಮಹಾರಾಜಂ ತನ್ನ ಮಗಳಭಯಮತಿ ಕುಮಾರಿಯಂ ಕೊಟ್ಟು ವಿವಾಹವಂ ನೆರವೇರಿಸುವುದರಿಂದ ತಾವುಗಳೆಲ್ಲರೂ ಪುತ್ರಮಿತ್ರಕಳತ್ರಾಪ್ತ ಬಂಧುವರ್ಗ ಪರಿಜನಸಮೇತರಾಗಿ ಕಲ್ಯಾಣಮಂಟಪಕ್ಕೆ ದಯಮಾಡಿಸಬೇಕೆಂದು ಪ್ರಾರ್ಥನೆ.

(ಮತ್ತೆ ಮಂಗಳವಾದ್ಯ)

ಗರ್ಭಾಂಕ ೫.

ಅರಮನೆಯ ಮುಂಗಡೆಯ ಬೀದಿ.

(ಕಲ್ಯಾಣಮಂಟಪಕ್ಕೆ ಹೋಗುವ ಜನರ ನಡಗರ ಐಯ್ಯಂಗಾರ್ರು, ಆಚಾರ್ರು, ಶಾಸ್ತ್ರಿಗಳು, ಪಂಡಿತರು, ಜೋಯಿಸರು ಮೊದಲಾದ ಬ್ರಾಹ್ಮಣರು ಬರುವರು.)

ಐಯ್ಯಂಗಾರ್ರು — ಏನು ಸ್ವಾಮಿ, ಆಚಾರ್ರೆ! ಪಾಪ, ಪಂಡಿತರನ್ನೂ ಕರೆದುಕೊಂಡು ಹೋಗೋಣ ತಡೆಯಿರಿ.

ಆಚಾರ್ರು:— ಬಿಡಿ ಬಿಡಿ! ನಿಮಗೆ ಭ್ರಾಂತು. ಪಂಡಿತರು ನಮ್ಮ ಸರಿಗೆ ಬರಬೇಕಾದರೆ ಅವರು ಇನ್ನೊಂದು ಜನ್ಮವನ್ನೇ ಎತ್ತಬೇಕು.

ಶಾಸ್ತ್ರಿ:— ಅವರು ಬರದಿದ್ದರೆ ಆಗೋದೇ ಇಲ್ಲ.

ಆಚಾರ್ರು:— ಆದೇನು ಅಂಥ ಕೆಲಸ, ಅವರಿಲ್ಲದೆ ನಿಂತುಹೋಗುವುದು?

ಶಾಸ್ತ್ರಿ:— ವಿದ್ಯುತ್ತಾಂಬೂಲ ಮೊದಲು ಅವರಿಗೇ ಕೊಡಬೇಕಲ್ಲ.

ಆಚಾರ್ರ್ರು:— ಅವರಿಗೆ ಹೇಗೆ? ಅವರಿಗೇನು ಬರೋದಪ್ಪ?

ಜೋಯಿಸ:— ನಾನು ಹೇಳುತ್ತೇನೆ ಕೇಳಿ ಸ್ವಾಮಿ, ಅವರಿಗೆಂದರೆ ಈಗ ತಾಂಬೂಲಗಳನ್ನು ಕೊಡುವ ಅಧಿಕಾರಿಗಳು ಸದ್ಯಃ ಸಮೀಪದ ಬಂಧುಗಳು; ಇದಲ್ಲದೆ ನೋಡಿ, ಅವರು ಯಾವ ಶುಂಠನಿಗೆ ಕಡಿಮೆಯಾಗಿದ್ದಾರೆ? ಚಂದ್ರಬಲ ವಂತೂ ಕೇಳಲೇ ಬೇಡಿ.

ಪಂಡಿತ:— [ಮುಂದೆಬಂದು] ಏನ್ರೀ ಹಾಗೆಂದರೆ, ನಮ್ಮ ಮನೆತನದಲ್ಲಿ ಎರ ಡಕ್ಷರಕ್ಕೆ ಮಾರ್ಗವಿತ್ತೇ ಎಂದಾದರೂ? ಆತ್ಮಸ್ತುತಿ, ಪರನಿಂದಾ-ಏಮಂಡೋಯಲ್ ಶಾಸ್ತ್ರುಲವಾರು, ಇವೇಮಿಯಾ ಲೇನಿ ನಾವಂಟಿ ಮಹಾತ್ಮನಕು ನಿವ್ವಕಮುರೆವರಿ ಕಿಚ್ಚೇದಿ?

ಆಚಾರ್ರ್ರು:— ಕಿಚ್ಚಿಗೇನು? ನಿಮ್ಮ ಹೊಟ್ಟೆಯು ತುಂಬ ಅದೇ ತುಂಬಿರು ವುದು.

ಶಾಸ್ತ್ರಿ:— ಮೀರು ಮಾಟಲಾಡಕಂಡಿ, ನೇ ನಿಪ್ಪಿಸ್ತಾನುಗಾ ಅಕ್ಕಡ ತಾಂ ಬೂಲಮಿಚ್ಚೆವಾಡು ಮನವಾಡೇ ಮೀರೆರುಗುದುರಾ?

ಪಂಡಿತ:— ತೆಲುಸುನುಲೇ ಅಯಿತೇನೂ ಇಂಕೆವರಿಕೈನ ಇಸ್ತುಂಟೆ ಮೀರುನ್ನಾರು ಏಮೈನ ಜೇಸಿವಾನಿ ನೆತ್ತಿಮೀದ ಒಕರಾಯಿವೇಸ್ತೆ ಸಾಲು; ಕಾವ ಲಸಿಯುಂಟೆ ಇದಿಗೋ ಮೀದಗ್ಗರ ಉಂಚಂಡಿ [ಎಂದು ಕಲ್ಲುಗಳನ್ನು ಕೊಟ್ಟು] ನೇನೂ ಕೊಂಚೆಮು ಪ್ರಯತ್ನಮುಜೇಸಿ ಆಸಾಯೆಬುಗಾರಿತೋ ಚೆಪ್ಪಿನಾನು. ವಾರಾ ವೇಳಕುವಸ್ತಾರೋ-ಲೇರೋ, ಶಾಸ್ತ್ರುಲವಾರು, ಮೀರುಕಾಸ್ತಾ ದಯವುಂಚವಲೆ.

ಶಾಸ್ತ್ರಿ:— ಎಂದುಕೇಡಿಸ್ತಾವಯ್ಯ? ನಾನೋರು ನೀಕು ತೆಲುಸುನು ಕದಾ?

ಆಚಾರ್ರ್ರು:— ಹೊತ್ತಾಯ್ತು! ಬಡಬಡ ಬನ್ನಿರಪ್ಪ.

(ತೆರೆಯಲ್ಲಿ)

"ಶತಮಾನಂ ಭವತಿ ಭವತಿ ಶತಾಯುಃ"

ಜೋಯಿಸ:— ಇದೀಗ ಸಮಯ. ನಡೆಯಿರಿ— ಹೋಗೋಣ.

(ಅವಸರದಿಂದ ಹೋಗುವರು)

ಗರ್ಭಾಂಕ ೬.

ಕಲ್ಯಾಣಮಂಟಪ.

(ದಂಪತಿಗಳು ಹಸೆಯ ಮೇಲೆ ಕುಳಿತಿರುವರು ಸಭೆ ನೆರೆದಿರುವುದು ಸಾಮಾನ್ಯವಾಗಿ ಎಲ್ಲರಿಗೂ ಗಂಧಪುಷ್ಪ ತಾಂಬೂಲಗಳನ್ನು ಕೊಡುತ್ತಿರುವರು ಮಂತ್ರಿ ಪ್ರತಿಷ್ಠಿತರಾಜಕುಮಾರನನ್ನು ಹೊನ್ನಿನ ರಾಶಿಗಳ ಹತ್ತಿರ ನಿಂತು ವಿನಿಯೋಗಿಸುತ್ತಿರುವರು)

ಮಂತ್ರಿ:— (ಕೈಜೋಡಿಸಿ) ಸಭಾಸದರೆಲ್ಲರೂ ತಾಂಬೂಲವನ್ನು ಸ್ವೀಕರಿಸಿ ದಂಪತಿಗಳನ್ನು ಆಶೀರ್ವದಿಸಬೇಕೆಂದು ಪ್ರಾರ್ಥನೆ. ಈ ವಿವಾಹಮಹೋತ್ಸವದಲ್ಲಿ ನಮ್ಮ ಮಹಾರಾಜರವರು ಮಾಡಿರುವ ದಾನಗಳ ವಿವರವನ್ನು ಅರಿಕೆಮಾಡಿಕೊಳ್ಳುವೆನು. ಎಲ್ಲರೂ ಕೇಳಬೇಕು.

(ಎಲ್ಲರೂ ಕೇಳುವರು)

೧. ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ (ಎಂದರೆ ಅನ್ನ, ಬಟ್ಟೆ, ಪುಸ್ತಕ ಮೊದಲಾದುವಕ್ಕೆ ಹೊನ್ನುಗಳು . . . . ೩ ಲಕ್ಷ
೨. ದೇಶಭಾಷಾಭಿವೃದ್ಧಿಗೆ . . . . ೧ ಲಕ್ಷ
೩. ಭಾಷಾಪರಿವರ್ತನಕ್ಕೆ . . . . ೨ ಲಕ್ಷ
೪. ವಿಜ್ಞಾನಕ್ಕೆ . . . . ೩ ಲಕ್ಷ.
೫. ಶಿಲ್ಪ, ವಾಣಿಜ್ಯ ಮೊದಲಾದುವಕ್ಕೆ . . . . ೨ ಲಕ್ಷ.
೬. ಅನಾಥಾಲಯಗಳಿಗೆ . . . . ೩ ಲಕ್ಷ.
೭. ಅಂಗಹೀನರಿಗೆ . . . . ೩ ಲಕ್ಷ.
೮. ವೈದ್ಯಶಾಲೆಗೆ. . . . . ೩ ಲಕ್ಷ.
೯. ಗೋವೈದ್ಯ, ಅಶ್ವವೈದ್ಯ, ಶ್ವಾವೈದ್ಯಗಳಿಗೆ . . . . . ೩ ಲಕ್ಷ.
೧೦. ಹಿಂದುಳಿದ ಜಾತಿಯವರಿಗೆ . . . . ೩ ಲಕ್ಷ
೧೧. ದೇವಾಲಯಗಳಿಗೆ . . . . ೨ ಲಕ್ಷ.
೧೨. ಅನ್ನಸತ್ರಗಳಿಗೆ . . . . ೨ ಲಕ್ಷ.
೧೩. ದೇಶಭಕ್ತರಿಗೆ ಬಹುಮಾನಕ್ಕಾಗಿ . . . . . . ೨ ಲಕ್ಷ.

(ಎಂದು ಓದಿ ಹೇಳುವನು ಎಲ್ಲರೂ ಸಂತೋಷವನ್ನು ತೋರಿಸುವಂತೆ ಕರತಾಡನವನ್ನು ಮಾಡುವರು)

ಮಂತ್ರಿ: — ಇನ್ನು ಆಶೀರ್ವಾದವಾಗಬಹುದು.

(ದಂಪತಿಗಳು ಎದ್ದು ನಿಂತುಕೊಳ್ಳುವರು)

ಆಶೀರ್ವಾದಗಳು.

(ಬ್ರಾಹ್ಮಣರು ಹರಸುವರು)

॥ಕಂದ॥ ಶ್ರೀಯಂ ಕುಡುವೆಡೆಯೊಳ್ ವಾ
ಕ್ಶ್ರೀಯಂ ನುಡಿವೆಡೆಯೊಳಾಜಿಯೊಳ್ ಮಿಗೆ ವಿಜಯ
ಶ್ರೀಯಂ ಕರುಣಿಸುಗಾವಗ
ಮಾಯತಿಯಿಂ ನಿಮಗೆ ವರ್ಧಮಾನಜಿನೇಂದ್ರಂ । ೭೩ ॥
ಕರುಣಿಸು-ಗಬ್ಜಜನಾಯುವ
ನರುಹಂತಂ ನಿಮಗೆ ನಿಖಿಲ ಸಂಪತ್ತುಗಳಂ
ಪರಮಾನಂದದೆ ಸುತನಂ
ವರಧರ್ಮಾಂಬುಧಿಯೊಳೊಗೆದ ಹಿಮಕರರುಚಿಯಂ ೭೪॥
ತೊಲಗುಗೆ ನಿಮ್ಮಾಳ್ವಿಕೆಯಿಂ
ಕೊಲೆಪುಸಿ ಮೊದಲಾದ ಪಾತಕಂಗಳ್ ಧರ್ಮಂ
ನೆಲಸಿರ್ಕೆ ರಾಜಭಕ್ತಿಯೊ
ಳೊಲವಿಂದಂ ನೆಗಳ್ಗೆ ನಿಮ್ಮ ಜನಪದದ ಜನಂ ॥ ೭೫ ।

ನಾಲ್ಕನೆಯ ಅಂಕವು ಮುಗಿದುದು.

ಶ್ರೀಃ

ಪಂಚಮಾಂಕ.

ಗರ್ಭಾಂಕ ೧.

ಹಸ್ತಿನಾವತಿಯ ಅಂತಃಪುರ.

(ಗುರುದತ್ತರಾಯನು, ಅಭಯಮತಿದೇವಿ, ಶ್ರೀದೇವಕುಮಾರ, ಇವರು ಸುಖಾಸೀನರಾಗಿ ಮಾತ ನಾಡುತ್ತಿರುವರು)

ರಾಜ:— ದೇವಿ, ವಿಶ್ವಕರ್ಮನು ಈಗ ಚಂಪಾಪುರದಲ್ಲಿ ಇನ್ನೂ ವಿಯದ್ಗಮನಕ್ಕೆ ತಕ್ಕ ರಥಗಳನ್ನು ಮಾಡುತ್ತಿರುವನಲ್ಲವೇ?

ಅಭಯಮತಿ:— ಆರ್ಯಪುತ್ರ, ಈ ವರೆಗೆ ಮಾಡಿರುವ ರಥಗಳಿಗೇ ಕೆಲಸವಿಲ್ಲದೆ ಮಕ್ಕಳು ಆಡಿಕೊಳ್ಳುವುದಕ್ಕೆ ಮಾಡಿದ ಹಾಗಾಯಿತು. ಶ್ರೀದೇವನೂ ಗಗನಗಮನ ವಿದ್ಯೆಯನ್ನು ಸಾಧಿಸಿರುವನು.

ಶ್ರೀದೇವ:— ಮೊನ್ನೆ ಮಹಾರಾಜರವರು ಬೇಟೆಗೆ ಹೋಗಿದ್ದಾಗ ನಾನು ಇಲ್ಲಿಂದ ವಿಮಾನವನ್ನೇರಿ ಮೇಲಕ್ಕೆ ಹೋಗಿ ನೋಡಿದೆನು. ವಿಂಧ್ಯಾಟವಿಯಲ್ಲಿ ಬೇಟೆಯಾಡುತ್ತಿದ್ದುದೆಲ್ಲವೂ ಚೆನ್ನಾಗಿ ಕಣ್ಣಿಗೆ ಕಾಣಿಸಿತು. ಅದಿರಲಿ, ಸಮುದ್ರದೊಳಗೆ ಹೋಗಿ ಮತ್ತಾರ ಕಣ್ಣಿಗೂ ಕಾಣಿಸದ ಹಾಗೆ ಇರುವುದಕ್ಕೆ ಆಗುವುದೇ? ಅದಕ್ಕೆ ಎಂಥ ರಥವಾಗಬೇಕು? ಅದನ್ನು ಮಾಡುವುದು ಹೇಗೆ?

ರಾಜ:— ವಿಶ್ವಕರ್ಮನು ಅಂಥ ಯಾನಗಳನ್ನು ಮಾಡಬಲ್ಲನು. ಮಾಡಿಯೇ ಇರುವನು. ವಿದ್ಯಾಧರರ ವಿದ್ಯೆಗಳನ್ನು ಸಾಧಿಸುವುದು ಮಾತ್ರ ಸುಲಭವಾದ ಕೆಲಸವಲ್ಲ.

ಶ್ರೀದೇವ:— ಪುರಾಣೇತಿಹಾಸಗಳಲ್ಲಿ ಹೇಳಿದ ಹಾಗೆಲ್ಲ ಈಗ ನಾವು ಮಾಡುವುದು ಸಾಧ್ಯವೇ?

ರಾಜ:— ಅಸಾಧ್ಯವಾದುದಾವುದೂ ಇಲ್ಲ; ಪ್ರಯತ್ನ, ಉತ್ಸಾಹ, ಸಾಧನಗಳಿರಬೇಕು.

ಶ್ರೀದೇವ:— ವಿದ್ಯಾಧರರ ವಿದ್ಯೆಗಳನ್ನು ನಾವು ಸಾಧಿಸುವುದರಿಂದ ನಮ್ಮ ದೇಶಾಭಿವೃದ್ಧಿಗೆ ಅನುಕೂಲವೇ ಸರಿ; ಆದರೆ ವಿದ್ಯಾಧರರ ಹೆಂಗಸರಂತೆ ನಮ್ಮಲ್ಲಿ ಹೆಂಗಸರೇಕೆ, ದೇಶದ ಹಿತಕ್ಕಾಗಿ ಅಷ್ಟು ಕಷ್ಟಪಡದೆ ಮನೆಗೆಲಸಗಳಲ್ಲಿ ಮಾತ್ರವೇ ಹೊತ್ತೆಲ್ಲವನ್ನೂ ನೂಕುತ್ತಿರುವರು.

ರಾಜ:— 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ರಾಜಕನ್ಯಕೆಯರೂ ಅಂತಃಪುರದ ಪುರಂಧ್ರಿಯರೂ ಇಂಥ ಕಾರ್ಯಗಳಲ್ಲಿ ಮುಂದಾಗಿದ್ದು ಇತರ ಸ್ತ್ರೀಸಮೂಹಕ್ಕೆ ಮಾರ್ಗವನ್ನು ತೋರಿಸಬೇಕು. ವಿಜಯಾರ್ಧಪರ್ವತದ ಎರಡು ಪರ್ವತಶ್ರೇಣಿಗಳಲ್ಲಿಯೂ ಇರುವ ವಿದ್ಯಾಧರ ಸ್ತ್ರೀಯರು ಸಲ್ಪವಾದರೂ ಭೇದ

ವಿಲ್ಲದೆ ಪುರುಷರು ಮಾಡುವ ಕಾರ್ಯಗಳೆಲ್ಲವನ್ನೂ ಮಾಡುವರು; ಮಕ್ಕಳನ್ನು ಹೆರುವ ಕೆಲಸವೊಂದು ಅವರಿಗೆ ಹೆಚ್ಚು. ಅವರಲ್ಲಿ ಆಳು–ಒಡೆಯರೆಂಬ ತಾರತಮ್ಯವಿಲ್ಲದೆ ಅತ್ಯಂತ ಪ್ರೀತಿಯಿಂದ ಇರುವರು.

ಶ್ರೀದೇವ:— ಅವರಲ್ಲಿ ಜಾತಿಮತಭೇದಗಳಿಲ್ಲವೇ?

ರಾಜ:— ಇರಬಹುದಾದರೂ "ಮನುಷ್ಯಜಾತಿ ತಾನೊಂದೆವಲಂ" ಎಂದು ಆದಿತೀರ್ಥೇಶ್ವರನ ವಚನವನ್ನು ಮರೆಯದೆ ತಂತಮ್ಮ ಕಾರ್ಯಗಳನ್ನು ಬಿಡದೆ ಇರುವರು.

ಶ್ರೀದೇವ:— ವರ್ಣಾಶ್ರಮಧರ್ಮಗಳನ್ನು ಪರಿಪಾಲಿಸುವುದು ರಾಜಧರ್ಮವೆಂದು ಕೇಳಿರುವೆನು. "ಮನುಷ್ಯ ಜಾತಿ ತಾನೊಂದೆವಲಂ" ಎಂದು ಈಗ ತಾವು ಅಪ್ಪಣೆಕೊಡಿಸಿದಂತೆ ಇದನ್ನು ಮನಸ್ಸಿನಲ್ಲಿಟ್ಟು ಅರಸರು ಕಾಪಾಡುವುದು ಸರಿ. ವರ್ಣಸಂಕರವು ಹಿತವೆಂದು ಪ್ರಜೆಗಳು ತಾವಾಗಿಯೇ ಮಾಡಿಕೊಂಡರೆ ವರ್ಣಾಶ್ರಮಧರ್ಮಕ್ಕೆ ಗುರುಗಳಾದ ನಾವು ಮಾಡತಕ್ಕುದೇನಿದೆ?

ರಾಜ:— ಸದಾಚಾರವನ್ನು ಪ್ರಜೆಗಳು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ನಾವು ಮಾಡಬೇಕಾದುದೆಲ್ಲವನ್ನೂ ಮಾಡಿದರೆ ಅಂಥ ವರ್ಣಸಂಕರವಾಗಲಾರದು; ಆದರೆ ಅವಸರ್ಪಿಣೀ ಕಾಲದಲ್ಲಿ ಧರ್ಮವಿರುದ್ಧವಾದ ನಡತೆಗಳು ಅಧಿಕವೆಂದು ಶಾಸ್ತ್ರಗಳಲ್ಲಿ ಹೇಳಿರುವರು.

(ಋಷಿನಿವೇದಕನು ಬರುವನು.)

ಋಷಿನಿವೇದಕ:— ಮಹಾರಾಜನೇ! ನಮ್ಮ ಶಿವಂಕರೋದ್ಯಾನದಲ್ಲಿ ಜಿನಧರ್ಮವೇ ಮೂರ್ತೀಕರಿಸಿದಂತೆ **ಅಮೃತಾಶ್ರವ ಭಟ್ಟಾರಕರು** ಮುನಿವೃಂದ ಸಮೇತರಾಗಿ ದಯಮಾಡಿಸಿರುವರು.

(ಎಲ್ಲರೂ ಏಳುವರು, ಗುರುದತ್ತ ರಾಜನು ಕೇಳಿದೊಡನೆ ಸಿಂಹಾಸನದಿಂದೆದ್ದು ಏಳಡಿಯನ್ನು ನಡೆದು ತಪೋವನದ ದಿಕ್ಕಿಗೆ ವಂದನೆಗೆಯ್ದು ಋಷಿನಿವೇದಕನಿಗೆ ಅಂಗಚಿತ್ತವನ್ನು ಕೊಟ್ಟು ಕಳುಹುವನು.)

(ತೆರೆಯಲ್ಲಿ ಆನಂದ ಭೇರೀತಾಡನವಾಗುವುದು)

(ಎಲ್ಲರೂ ಹೋಗುವರು)

ಗರ್ಭಾಂಕ ೨.

ಮುನ್ಯಾಶ್ರಮ.

(ಮುನಿಜನಪರಿವೃತರಾದ ಅಮೃತಾಸ್ರವಭಟ್ಟಾರಕರು ಕಾಣಿಸಿಕೊಳ್ಳುವರು. ಧರ್ಮೋಪದೇಶವಾಗುತ್ತಿರುವುದು)

ಅಮೃತಾಸ್ರವಗುರುಗಳು:— (ಮುನಿವೃಂದವನ್ನೂ ಭವ್ಯೋತ್ತಮರನ್ನೂ ನೋಡಿ ಉಪದೇಶ ಮಾಡುತ್ತಿರುವರು.) ಧರ್ಮಬಾಂಧವರೇ: ದಾತನ ಲಕ್ಷಣಗಳನ್ನು ನಿಮಗೆ ತಿಳಿಸಿದುದಾಯ್ತು. ಈಗ ಕರುಣಾದಾನ ಅಥವಾ ದಯಾದಾನವನ್ನು ವಿಚಾರ ಮಾಡುವ. ನಾವು ದಯೆಯನ್ನು ಆರಲ್ಲಿ ತೋರತಕ್ಕುದೆಂಬುದನ್ನು ಸೂತ್ರಕಾರರು ಹೀಗೆ ಹೇಳುವರು—

"ಅಇವುಡ್ಢ ವಾಲ ಮೂಯಂಧ ವಹಿರ ದೇಸಂತರೀಯ ರೋಇತ್ತಂ
ಜಹ ಜೋಗ್ಗಂ ದಾಯವ್ವಂ ಕರುಣಾದಾಣೇತಿಭಣಿಊಣ ।

ಅಇವುಡ್ಢ—ಅತಿವೃದ್ಧ, ವಾಲ—ಬಾಲ, ಮೂಕ, ಅಂಧ, ಬಧಿರ, ದೇಶಾಂತರೀಯ ರೋಗಿಷ್ಟ ಯಥಾಯೋಗ್ಯಂ ದಾತವ್ಯಂ ಕರುಣಾದಾನಂ ಇತಿಭಣಿತ್ವಾ:—

ಬಹಳ ಮುದುಕರಾಗಿರುವರು, ಬಹಳಚಿಕ್ಕವರಾಗಿರುವರು, ಮೂಕರು, ಕುರುಡರು, ಕಿವುಡರು, ದೇಶಾಂತರಿಗಳು, ರೋಗಿಷ್ಠರು, ಮೊದಲಾದವರಿಗೆ ಹೇಗೆ ಯೋಗ್ಯವೋ ಹಾಗೆ ಕೊಡುವಂಥ ದಾನಕ್ಕೆ ಕರುಣಾದಾನವೆಂದು ಹೆಸರು— ಎಂಬುದು ಸೂತ್ರಾರ್ಥವು.

ಸೂತ್ರಕಾರರು ಅತಿವೃದ್ಧರನ್ನೂ ಅತಿಬಾಲರನ್ನೂ ಏಕೆ ಹೇಳಿದರು— ಎಂದರೆ, ಇವರಿಗೆ ಸ್ವತಃ ಸಂಪಾದಿಸುವುದಕ್ಕೆ 'ಶಕ್ತಿ ಹೀನವಾಗಿರುವುದು; ಸಾಮರ್ಥ್ಯ ಸಾಲದು; ತಂತಮ್ಮ ಕಾರ್ಯಗಳನ್ನು ತಾವೇ ಮಾಡಿಕೊಳ್ಳುವುದಕ್ಕೆ ತನುಮನಗಳ ದಾರ್ಢ್ಯವಿರಲಾರದು; ಇವರಿಗೆ ಬೇರೊಬ್ಬರಿಂದ ಸಹಾಯವಾದಲ್ಲದೆ ಇವರ ಕೆಲಸಗಳಾಗಲಿ ನಿತ್ಯವಾರಗಳಾಗಲಿ ನಿಂತು ಹೋಗುವವು. ರಕ್ಷಕರು ಇವರಿಗೆ ಇದ್ದರೂ ಚಿಂತೆಯಿಲ್ಲ, ನಾವು ಇವರನ್ನು ದಯೆಯಿಂದ ನೋಡತಕ್ಕುದು; ಇವರಿಗೆ ಬೇಕಾದುದು ಯೋಗ್ಯತೆಗೆ ತಕ್ಕಹಾಗೆ ಅನ್ನವಸ್ತ್ರಗಳನ್ನು

ಕೊಡಬೇಕು. ಮೂಕ, ಅಂಧ, ಬಧಿರ, ಇವರ ವಿಷಯದಲ್ಲಿಯೂ ಮೇಲೆ ಹೇಳಿದ ಕಾರಣವೇ ಇಲ್ಲಿಯೂ ಸರಿಹೋಗುವುದು. ಕೆಲವರು ಇಂಥವರನ್ನು ಕಂಡರೆ ಮೂಗನ್ನು ಕೆರೆದು ಮನಬಂದಂತೆ ಹಾಸ್ಯಮಾಡಿ ಅವರನ್ನು ಪೀಡಿಸಿ ಆನಂದವನ್ನು ಪಡೆದೆವೆಂದು ಭಾವಿಸುವರು. ಇದು ಧರ್ಮತತ್ಪರರು ಮಾಡತಕ್ಕ ಕೆಲಸವಲ್ಲ. ದೇಶಾಂತರಿಗಳನ್ನು ಕಂಡೊಡನೆ ಕೆಲವರು ಅವರ ನಡೆನುಡಿಗಳನ್ನು ಹೀಯಾಳಿಸುವರಲ್ಲದೆ ಅವರನ್ನು ಬಾಯ್ಗೆ ಬಂದಂತೆ ಬಯ್ದು ಕಳುಹುವರು. ದಯಾವಂತರು ಹೀಗೆಲ್ಲಾ ಮಾಡಬಾರದು. ಆದುದರಿಂದ—

"ಅಇವುಡ್ಢ ವಾಲ ಮೂಯಂಧ ವಹಿರ ದೇಸಂತರೀಯ ರೋಇತ್ಥಂ
ಜಗಜೊಗ್ಗಂ ದಾಯವ್ವಂ ಕರುಣಾದಾಣೇಣ ಭಣಿಊಣ ||

(ಎಂದು ಮತ್ತೆ ಸೂತ್ರವನ್ನು ಹೇಳುವರು)

(ಅಷ್ಟಕ್ಕೆ ಸರಿಯಾಗಿ ಗುರುದತ್ತರಾಯನು ಅಭಯಮತಿದೇವಿ ಶ್ರೀದೇವಕುಮಾರರೊಡನೆ ಬಂದು ತ್ರಿಃ ಪ್ರದಕ್ಷಿಣೆಗೆಯ್ದು ಪೂಜಿಸಿ ಉಚಿತಾಸನದಲ್ಲಿ ಕುಳಿತು ಧರ್ಮವನ್ನು ಕೇಳುತ್ತಿರುವನು)

ಅ. ಭ:— ಕೇಳಿ, ದಯಾದಾನದ ವಿಷಯದಲ್ಲಿ ಸೂತ್ರಕಾರರು ಇನ್ನೂ ಹೇಳಿರುವುದೇನೆಂದರೆ—

"ಉವವಾಸ ವಾಹಿ ಪರಿಸಮ ಕಿಳೇಸ ಪರಪೀಡಿಯಂ ಮುಣೇಊಣ
ಪಚ್ಛಂ ಸರೀರ ಜೋಗ್ಗಂ ಭೇಸಹದಾಣಂ ಪಿ ದಾಯವ್ವಂ ||
ಉಪವಾಸ-ಉಪವಾಸ, ವಾಹಿ-ವ್ಯಾಧಿ, ಪರಿಶ್ರಮ, ಕ್ಲೇಶ, ಪರ ಪೀಡಿತಂ ಜ್ಞಾತ್ವಾ
ಪಥ್ಯಂ ಶರೀರಯೋಗ್ಯಂ ಭೈಷಜ್ಯದಾನಂ ಅಪಿದಾತವ್ಯಂ ||

ಉಪವಾಸಾದಿ ಕಾರಣಗಳಿಂದ ಶ್ರಾಂತರಾದವರಿಗೆ ತಕ್ಕ ಔಷಧವನ್ನೂ ಆಹಾರವನ್ನೂ ದಾನಮಾಡತಕ್ಕದು:—

ಆವಸ್ಸ ಸಜ್ಝಾಇ ಲಹಾವಿ ಊಣ ದೀಜ್ಜಂತಿ ಜಂ ಜಹಾಜೋಗ್ಗಂ
ತಂಜಾಣ ಸತ್ಥದಾಣಂ ಜಿಣವಯಣಜ್ಝಾವಣಂ ಚತಹಾ ||

ಶಾಸ್ತ್ರಾಂಶಗಳಲ್ಲಿ ಆವಶ್ಯಕಗಳಾದ ವಿಷಯಗಳನ್ನು ಬರೆಯಿಸಿ ಯಥಾ ಯೋಗ್ಯವಾಗಿ ಕೊಡುವದಾನಕ್ಕೆ ಶಾಸ್ತ್ರದಾನವೆಂದು ಹೆಸರು:—

ಜಂಕೀರಇ ಪರರಕ್ಖಾ ಣಿಚ್ಚಂ ಮರಣಭಯಭೀರುಜೀವಾಣಂ
ತಂದಾಣಂ ಸಿಂಹಾಸಣ ಸಂಠಿಯಂ ಸವ್ವದಾಣಾಣಂ ||

ದಾನಗಳಲ್ಲಿ ಅತಿಶ್ರೇಷ್ಠವಾದುದು ಅಭಯಧಾನವು. ದಾನವೆಂಬ ಪ್ರಜೆಗಳಿಗೆ ಸಿಂಹಾಸನಾಸೀನನಾದ ರಾಜನಂತೆ ಅಭಯದಾನವೆಂಬುದು. ಅದರ ಲಕ್ಷಣವೇನೆಂದರೆ ಸದಾಕಾಲದಲ್ಲಿಯೂ ಇತರ ಜನಗಳ ಸಂರಕ್ಷಣೆಯನ್ನು ಮಾಡುವುದು. ಮತ್ತು ಮರಣಕ್ಕೂ ಭಯಕ್ಕೂ ಅಂಜಿದಂಥ ಜೀವಿಗಳ ಭಯಗಳನ್ನು ತೊಲಗಿಸುವುದು, ಇದೇ ಅಭಯದಾನವೆಂದು ಸೂತ್ರದ ಸೂಕ್ಷ್ಮಾರ್ಥ.

ಗುರುದತ್ತ:— (ಧರ್ಮಶ್ರವಣಾನಂತರದಲ್ಲಿ ಎದ್ದು ಕೈಮುಗಿದು ನಿಂತು)

|| ಕಂದ || ಭವದರ್ಶನದಿಂ ಜನ್ಮಂ
ಪವಿತ್ರಮಾಯ್ತೆಮಗೆ ಪಾಲನೊಳಲೆಯೊಳೆಂತಂ
ತೆವಲಂ ಧರ್ಮಾವ ನೀಂಟಿಸಿ
ಕಿವಿಯಿಂ ಪೊರೆದೆಮಗೆ ಮುನಿಪ ಮರುಭವ ಮೊಳದೇ|| ೭೬ ||
ಆವಾವ ಭವದೆ ಮುನ್ನಂ
ನಾವಿನಿತುವರಂ ಬಳಲ್ದೆವಿನ್ನೆಮಗೆ ಭವಂ
ದೇವಾಬೇಡೆಂದುಂ ನೀ
ಮೋಸಿಯೆ ದಯೆಗೆಯ್ವುದೆಮಗೆ ದೀಕ್ಷೆಯನೀಗಳ್ || ೭೭ ||

ಅಮೃತಾಸ್ರವ:— ಹಾಗಾದರೆ, ಸಾವಧಾನದಿಂದ ಕೇಳು—

|| ಕಂದ || ಮುನ್ನಂ ನೆರಪಿದ ಸುಕೃತಂ
ನಿನ್ನಂ ಬಿಡದಿನಿತುವರೆಗಮುತ್ತಮಗತಿಯೊಳ್
ಕೆನ್ನಂ ನಡೆಪಿದುದೆಮ್ಮಂ
ನಿನ್ನಲ್ಲಿಗೆ ತಂದುದಲ್ತೆ ಪುಣ್ಯೋದಯದಿಂ || ೭೮ ||

ತಿರಿದೈ ಪಲತೆರದಿಂ ಸಂ
ಸರಣಾಟವಿಯಲ್ಲಿ ಮುನ್ನಮಿನ್ನಿಲ್ಲಿಗೆ ನೀಂ
ನೆರಪುವ ಸಮ್ಯಕ್ಚರಿತದೆ
ದೊರೆಗುಂ ಕೈವಲ್ಯ ಲಕ್ಷ್ಮಿನಿನಗವನಿಪತೀ ॥ ೭೯ ॥

ಗುರುದತ್ತ:— ಮಹನೀಯರೇ: ಹಿಂದೆ ನಾವು ಆವಾವ ಜನ್ಮವೆತ್ತಿದ್ದೆವೆಂಬುದನ್ನು ವಿವರಿಸಬೇಕು

ಅಮೃತಾ:— ಎಲೈ ರಾಜನೆ, ನೀನು ಇದಕ್ಕೆ ಹಿಂದಿನ ನಾಲ್ಕನೆಯ ಭವದಲ್ಲಿ ಶ್ರಾವಸ್ತಿನಗರದಲ್ಲಿ ಉಪರಿಚಿತರಾಜನಾಗಿದ್ದು ಐನೂರ್ವರರಸಿಯರೂ ಐನೂರ್ವರ್ಕುಮಾರರೂ ಕೂಡಿದ್ದರೂ ಪರಿಗ್ರಹಪ್ರಮಾಣವಿಲ್ಲದೆ ಪಾಪೋದಯದಿಂದಿರಲೊಂದುದಿನ ಜಲಕ್ರೀಡೆಯಲ್ಲಿದ್ದ ನಿನ್ನನ್ನೂ ನಿನ್ನರಸಿಯರನ್ನೂ ಕಂಡು ನಿನ್ನಭೋಗಕ್ಕೆ ಮತ್ಸರಿಸಿ ವಜ್ರದಾಡನೆಂಬ ಖಚರನು ಒಂದು ದೊಡ್ಡ ಶಿಲೆಯನ್ನು ತಂದು ಅದರಿಂದ ಕೊಳವನ್ನು ನಿಚ್ಛಿದ್ರವಾಗಿ ಮುಚ್ಚಿ ನಿಮ್ಮನ್ನು ಕೊಲ್ಲಲು, ಆರ್ತಧ್ಯಾನಪರಿಣಾಮದಿಂದ ನೀನು ಸರ್ಪಾಶ್ರಯವೆಂಬ ಗುಹೆಯಲ್ಲಿ ಕಾಳಸರ್ಪವಾಗಿ ಬಿದ್ದಿದ್ದೆ.

ಆಗ ನಿನಗೂ ನಿನ್ನರಸಿಯರಿಗೂ ಒದವಿದ ಅಪಮೃತ್ಯುವಿಗೆ ಕಾರಣವೇನೆಂದು ಕೇಳಿದ ನಿನ್ನ ಮಗನಾದ ಅನಂತವೀರ್ಯನಿಗೆ ಸಾರಸ್ವತ ಭಟ್ಟಾರಕರು ನಡೆದ ಸಂಗತಿಯನ್ನು ತಿಳಿಸಿ, ಧರ್ಮೋಪದೇಶವನ್ನು ಮಾಡಿ ವ್ರತವನ್ನು ಕೊಟ್ಟುದರಿಂದ ಪವಿತ್ರಮನನಾದರೂ ರೌದ್ರಪರಿಣಾಮದಿಂದ ಸತ್ತು ವಿಮಲದೇವನೆಂಬ ಭವನವಾಸಿಗನಾದೆ. ಭವನವಾಸಿಗನಾಗಿ ಹಲವು ಕಾಲವಾದಮೇಲೆ ಒಂದುದಿನ ಚೈತ್ಯಾಲಯವಂದನೆಯನ್ನು ಮಾಡಿ ಬರುತ್ತಿರುವಾಗ ನಿನಗೆ ವಿಭಂಗಜ್ಞಾನವಾಗಲು ಕೆಳಗೆನೋಡಿ ವಜ್ರದಾಡಖಚರನನ್ನು ಕಂಡೆ. ಅವನನ್ನೂ ಅವನ ಹೆಂಡಿರನ್ನೂ ಅವನು ಸಾಧಿಸುತ್ತಿದ್ದ ವಿದ್ಯೆಗಳನ್ನೂ ಕೆಡಿಸಿದೆ. ಆಗ ನಿನಗೆ ಆರು ತಿಂಗಳ ಆಯುಷ್ಯವು ಉಳಿದಿತ್ತು.

ಇತ್ತ ಹಸ್ತಿನಾಪುರದ ವಿಜಯದತ್ತಮಹಾರಾಜನಿಗೂ ಆವನ ಹೆಂಡತಿ ವಿಜಯಾ ಮಹಾದೇವಿಗೂ ಬಹುಕಾಲದಿಂದ ಮಕ್ಕಳಿಲ್ಲದಿರಲು ಗುರುಗಳ ಉಪ

ದೇಶದಿಂದ ಜನಿಸಿದೆಯಾದಕಾರಣ ಗುರುದತ್ತನೆಂಬ ಕುಮಾರನಾಗಿಹುಟ್ಟಿದೆ. ವಜ್ರ ಪಾಡ ಖೇಚರನು ನರಕದಲ್ಲಿ ಮೂರು ಸಾಗರೋಪಮಾಯುಷ್ಯನಾಗಿ ತಿರುಗಿ ಬಂದು ನೀಲಗಿರಿಯ ಪ್ರದೇಶದಲ್ಲಿ ಹೆಬ್ಬುಲಿಯಾಗಿರಲು ನೀನು ಹೋಗಿ ಕೊಂದು ಬಂದೆ. ಹುಲಿ ಸತ್ತು ಸೌರಾಷ್ಟ್ರ ದೇಶದ ಪಳ್ಳಿಖೇಡವೆಂಬ ಊರಲ್ಲಿ ಇಳಾಭರಣನೆಂಬ ಬ್ರಾಹ್ಮಣನಿಗೆ ಹಲಮುಖನೆಂಬ ಹೆಸರ ಮಗನಾಗಿ ಹುಟ್ಟಿರುವನು.

ಗುರುದತ್ತ:— ಗುರು ಮಹಾರಾಜ! ಅಭಯಮತೀದೇವಿಯ ವೃತ್ತಾಂತ ವನ್ನೂ ನಿರೂಪಿಸಬೇಕು.

ಅಮೃತಾ:— ಚಂಪಾಪುರದಲ್ಲಿ ಗರುಡವೇಗನೆಂಬ ಕಿರಾತನಿದ್ದನು. ಅವನ ಹೆಂಡತಿ ಗೋಮತಿಯೆಂಬವಳು. ಒಮ್ಮೆ ಶ್ರಾವಕರೆಲ್ಲರೂ ಸಮಾಧಿ ಗುಪ್ತಾಚಾರ್ಯರಲ್ಲಿ ಧರ್ಮೋಪದೇಶವನ್ನು ಕೇಳುತ್ತಿರಲು, ಅವಳೂ ಕೇಳಿ ವ್ರತವನ್ನು ಕೈಕೊಂಡು ಮನೆಗೆ ಬಂದಳು. ಗರುಡವೇಗನು ಬಲೆಯಲ್ಲಿ ಹಿಡಿದಿದ್ದ ಹಕ್ಕಿಗಳೆಲ್ಲವನ್ನು ಅವಳು ಬಿಟ್ಟು ಕಳೆದುದಕ್ಕೆ ಅವನು ಕೋಪಗೊಂಡು ಅವಳನ್ನು ಹೊಡೆದನು. ಆದಕ್ಕವಳು ಗಂಡನ ಮನೆಯನ್ನು ಬಿಟ್ಟು ಆಪ್ತರ ಮನೆಯಲ್ಲಿ ಹೋಗಿದ್ದಳು. ಧಾತ್ರಿವಾಹನರಾಜನ ಪತ್ನಿಯನ್ನು ನೋಡಿ ಅವಳ ಸಂಪತ್ತಿಗೆ ಅಪೇಕ್ಷೆಪಟ್ಟುದರಿಂದ, ಕೆಲವು ಕಾಲಕ್ಕೆ ವ್ಯಾಧಿಯಿಂದ ಸತ್ತು, ವ್ರತದ ಫಲದಿಂದ ಅಭಯಮತಿಕುಮಾರಿಯಾಗಿ ಹುಟ್ಟಿದಳು.

ರಾಜ ರಾಣಿ:— (ಎದ್ದು ನಿಂತು ಕೈಜೋಡಿಸಿ) ನಮಗೀ ಸಂಸಾರಭ್ರಮಣವು ಸಾಕಾಗಿರುವುದು. ಈ ಭವಾಬ್ಧಿಯನ್ನು ದಾಟುವುದಕ್ಕೆ ಜೈನದೀಕ್ಷೆಯನ್ನು ಕೊಟ್ಟು ಅನುಗ್ರಹಿಸ ಬೇಕು.

ಅಮೃತಾ:—

।ಕಂದ॥ ನಗರಿಗೆ ತೆರಳ್ದೀಗಳ್ ನಾ
ಳೆಗೆ ಬನ್ನಿಂ ಪರಿದು ನಿಮ್ಮ ತೊಡಗರ್ಗಳನೆಲ್ಲಂ
ಮಿಗೆ ನಿಶ್ರೇಯಸಮಂ ನೆ
ಟ್ಟಗೆ ನಿಮಗೊದವಿಸುವ ಜೈನದೀಕ್ಷೆಯ ನೀವೆಂ ॥೮೦॥

(ಅರಸನೂ ಅರಸಿಯೂ ಹೊರಡುವರು.)

(ತೆರೆ ಬೀಳುವುದು)

ಗರ್ಭಾಂಕ ೩.

ಪಳ್ಳಿಖೇಡ–ಹೊಲದ ದಾರಿ.

(ಏಕವಿಹಾರಿಗಳಾದ ಗುರುದತ್ತ ಮುನಿಗಳು ಸಂಚರಿಸುತ್ತ ಬರುವರು)

(ಕೆರೆಯೊಳಗೆ)

|| ಕಂದ || ಬಿಟ್ಟಂ ದಿವಸಶ್ರೀಯಂ
ಬಿಟ್ಟಂ ಮುನ್ನಿರ್ದ್ದ ತಾಣಮುಂ ಪಡುಗಡಲೊಳ್
ಪಟ್ಟಂ ರವಿಯಿನೆ ಕೊಳ್ ಬಿ
ನ್ನಟ್ಟಿಯೆ ಬಂದತ್ತು ಕತ್ತನಮುಮ ತಮಂಧಂ | ೮೧ ||

(ಮುನಿಗಳು ಸಂಧ್ಯಾವರ್ಣನೆಯನ್ನು ಕೇಳಿದೊಡನೆ ಮುಂದಕ್ಕಡಿಯಿಡದೆ ಸೂರ್ಯ ಪ್ರತಿಮೆಯಂತೆ ನಿಂತಿರುವರು; ಆ ಮೇಲೆ ಹಲಮುಖನು ಬರುವನು)

ಹಲಮುಖ:— (ಪೂರ್ವದಿಕ್ಕಿನಲ್ಲಿ ಸ್ವಲ್ಪದೂರ ನಡೆದು ತಿರುಗಿ ಬಂದು ಪಶ್ಚಿಮ ದಿಕ್ಕಿನಲ್ಲಿ ಸ್ವಲ್ಪ ದೂರ ನಡೆದು ತಿರುಗಿ ಬಂದು ಮುನಿಗಳ ಹತ್ತಿರಕ್ಕೆ ಹೋಗಿ ಕೈಮುಗಿದು)

ಗುರುಗಳೇ, ನಾನು ಪೂರ್ವದಿಕ್ಕಿನಲ್ಲಿ ಹೋಗಿ ಹೊಲದಲ್ಲಿರುವೆನೆಂದು ಮನೆಯಲ್ಲಿ ಅವಳಿಗೆ ತಿಂಡಿಯನ್ನು ಅಲ್ಲಿಗೆ ತರಬೇಕೆಂದು ಹೇಳಿ ಬಂದೆನು. ಪೂರ್ವ ದಿಕ್ಕಿನಲ್ಲಿ ಕೆಸರು ಬಹಳವಾಗಿರುವುದರಿಂದ ಪಶ್ಚಿಮ ದಿಕ್ಕಿಗೆ ಹೋಗುವೆನು. ಅವಳು ಈ ಮಾರ್ಗವಾಗಿ ಬಂದರೆ ನಾನು ಪಶ್ಚಿಮ ದಿಕ್ಕಿಗೆ ಹೋಗಿರುವುದರಿಂದ ತಿಂಡಿಯನ್ನು ಅಲ್ಲಿಗೆ ತೆಗೆದುಕೊಂಡು ಹೋಗೆಂದು ಹೇಳಬೇಕು.

(ಎಂದು ಹೇಳಿ ಹೋಗುವನು ಗುರುಗಳು ನಿಂತೇ ಇರುವರು)

(ಮತ್ತೆ ಹಲಮುಖನು ಸುತ್ತಿಬಂದು ಮನೆಯ ಬಾಗಿಲಲ್ಲಿ ನಿಂತು —)

"ಎಲೆ–ಎಲೆ–ಎಲೆ,–

ಹಲಮುಖನ ಹೆಂಡತಿ:— (ಒಳಗಿನಿಂದ) ಬಂದೆ, ಬರುವುದರೊಳಗೆ ಎಷ್ಟು ಸಾರಿ ಕೂಗಿಕೊಳ್ಳುತ್ತೀರಿ?

ಹಲಮುಖ:— ಬಾ ಬೇಗ, ಬಾರೇ.

ಹ. ಹೆಂ:— (ಬರುವಳು)

ಹಲಮುಖ:— (ಹೆಂಡತಿಯನ್ನು ಚೆನ್ನಾಗಿ ಹೊಡೆಯುವನು)

ಹ. ಹೆಂ:— ನಿಮ್ಮ ಕೈ ಸೇದಿ ಹೋಗಲಿ. ಕೈಯಲ್ಲಾಗದ ಮುಂಡೆಯು ಮಕ್ಕಳೇ ಹೆಂಗಸರನ್ನು ಹೊಡೆಯುವುದು.

ಹಲಮುಖ:— ತಿಂಡಿಯನ್ನು ಹೊಲಕ್ಕೆ ತಾರೆಂದರೆ ತರುವುದಕ್ಕೇನು ರೋಗಬಂದಿತ್ತು ನಿನಗೆ?

ಹ. ಹೆಂ:— ನೀನಾವಕಡೆ ಹೋಗಿ ಸತ್ತಿರುವೆಯೋ, ಕಂಡವರಾರು?

ಹಲಮುಖ:— ಏನೇನು? ಬರುವದಾರಿಯಲ್ಲಿ ನಿಂತಿದ್ದ ಋಷಿಗಳಿಗೆ ಹೇಳಿ ಹೋಗಿದ್ದೆನಲ್ಲ. ಕೇಳುವುದಕ್ಕೆ ನಿನಗೆ ನಾಲಗೆ ಸೆಳೆದು ಬಿದ್ದಿತ್ತೋ?

ಹ. ಹೆಂ:— ನಿಮ್ಮ ಋಷಿಯರನ್ನು ನೀವೇ ಮಾತನಾಡಿಸ ಬೇಕು. ಎದುರಿಗೆ ಬಾಯ್ಬಿಡಿದು ಕೊಂಡರೂ ಉಃ ಎನ್ನಲಾರರು.

ಹಲಮುಖ:— (ಕ್ರೋಧದಿಂದ ಮನೆಯೊಳಗೆ ಹೋಗಿ ಎಣ್ಣೆಯಲ್ಲಿ ಅದ್ದಿದ ಹರಕು ಬಟ್ಟೆಗಳು, ಹುಲ್ಲು, ಬೆಂಕಿ ಇವೆಲ್ಲವನ್ನು ತರುವನು)

ಹ. ಹೆಂ:— (ಭಯದಿಂದ) ಇವೆಲ್ಲ ಯಾಕೆ? ಯಾರಿಗಾಗಿ?

ಹಲಮುಖ:— ಆ ಮುನಿಯ ಮೈಗೆ ಇದನ್ನೆಲ್ಲಾ ಸುತ್ತಿ ಬೆಂಕಿ ಹಚ್ಚು ವೆನು. (ಹೋಗುವನು)

ಹ. ಹೆಂ:— ಅಬ್ಬಬ್ಬಾ! ಎಂತಹ ಯೋಗವಪ್ಪ! ಮೈಗೆ ಬೆಂಕಿ ಹಚ್ಚಿ ದರೂ ಅಳ್ಳಾಡನಲ್ಲಾ!

(ತೆರೆಯೊಳಗೆ)

(ಘಂಟೆ, ಶಂಖ, ಪಟಹ ಮೊದಲಾದ ವಾದ್ಯದ ಧ್ವನಿಗಳು)

ಹ. ಹೆಂ:— ಅಬ್ಬಾ, ಎಷ್ಟು ಪುಣ್ಯ ಪುರುಷರಿವರು? ಅಮರರೇ ಬಂದು ಇವರನ್ನು ಪೂಜಿಸುವರಲ್ಲಾ, ಹೋಗಿ ನಾನೂ ದರ್ಶಿಸುವೆನು.

(ಹೋಗುವಳು)

(ಸಿಂಹಾಸನದ ಮೇಲೆ ಗುರುದತ್ತಕೇವಲಿಗಳು ನಿಂತಿರುವರು. ಚತುರ್ನಿಕಾಯದಮರರು ಬಂದು ವಂದಿಸುವರು ಚಾಮರ ಸೇವೆ, ಅರ್ಚನೆ, ಪೂಜೆಗಳಾಗುವುವು ಬಳಿಕ ಸ್ತೋತ್ರಮಾಡುವರು.)

ಸ್ತುತಿ.

ಜಯ ಜೀಯ ನಂದ ಜಯ ದೇವನಂದ
ಜಯ ಕಾಮಭಂಜನ ಜಯ ವಿಗತಾಂಜನ
ಜಯ ನಿತ್ಯ ಭೋಗಾ ಜಯ ವೀತರಾಗಾ
ಜಯ ದಿವ್ಯ ಗಾತ್ರಾ ಜಯ ಭಾಳನೇತ್ರಾ
ಜಯ ಕಾಲಸಂಹರ ಜಯ ಶಂಭೋಶಂಕರ
ಜಯ ನತಸುರ ರಾಜ ಜಯ ಜಿತರವಿತೇಜ
ಜಯ ಮುಕ್ತಿದಾಯಕ ಜಯ ಲೋಕನಾಯಕ
ಜಯ ವೀತರೋಷಾ ಜಯ ಭವ್ಯತೋಷಾ
ಜಯ ರತ್ನಭೂಷಾ ಜಯ ದಿವ್ಯಭಾಷಾ ॥೬೦॥

(ಚತುರ್ನಿಕಾಯಾಮರರು ಹೋಗುವರು.)

ಹಲಮುಖ: — (ನಡನಡುಗಿ ಕೇವಲಿಗಳ ಪಾದಪದ್ಮಕ್ಕೆರಗಿ)

॥ಕಂದ॥ ಎನ್ನಾಚರಿಸಿದ ಪೊಲ್ಲಮೆ
ಯಂ ನಿಷ್ಕಾರಣದಿನರ್ಹನೀಂ ದಯೆಯಿಂದಂ
ಮನ್ನಿಸಿ ಮತ್ತೊಲವಿಂದೆನ
ಗಿನ್ನೀವುದು ಜೈನದೀಕ್ಷೆಯಂ ಭವರಹಿತಾ ॥೬೧॥
ಎಸಗಿದೆನಾಂ ದುಷ್ಕೃತಮಂ
ಮುಸಕದೆ ತನುವಿಂದೆ ವಾಕ್ಕಿನಿಂ ಮನದಿಂ ಮ
ನ್ನಿಸು ಜಿನಧರ್ಮವನುಪದೇ
ಶಿಸು ಕರುಣಿಸು ಸುವ್ರತಂಗಳಂ ಪರಮಜಿನಾ ॥೬೨॥
ಆವಾವ ಭವದೆ ತೊಳಲ್ದಾ
ನೋವದೆ ಮುಂಪೊಲ್ಲಕೆಯ್ದೆನೋ ಧೂರ್ತಿಂದಂ

ದೇವರ್ಗಳ್ಕಟಾ ನಿಮ್ಮಡಿ
ದಾವರೆಯಂ ಕಂಡಬಳಿಕವೆನಗರಿಯುಮೆಯೇ || ೭೫ ||

ತೊಲಗಿಸಿಮೆನ್ನರಿಯುಮೆಯಂ
ತೊಲಗಿಸಿಮೀಭವದ ದಂದುಗಂಗಳನೆಲ್ಲಂ
ಸಲೆಯುವಸರ್ಪಿಣಿಯೊಳಗೆನ
ಗೊಲವಿಂ ದಯೆಗೆಯ್ವುದಮಳ ರತ್ನತ್ರಯಮಂ || ೭೬ ||

ಪ್ರಾರ್ಥನೆ.

ಅಮರೇಂದ್ರಾಸನ ಕಂಪನಂ
ದಿವಿಜವೃಂದ ಸ್ತೋತ್ರ ಕೋಳಾಹಳಂ
ಸುಮನೋವೃಷ್ಟಿ ಸಿತಾತಪತ್ರಮಮಳ
ಶ್ರೀ ಸಿಂಹಪೀಠಂಜಿನ
ಕ್ರಮ ಪಂಕೇರುಹ ಭಕ್ತಿಯಿಂದೆ
ಸಮನಿಕ್ಕುಂ ಜೇವಿ ಗೆಂದಂದು ಚೋ
ದ್ಯಮೆ ಧರ್ಮಾಮೃತಕೊಲ್ದ ಭವ್ಯ ಜನಕಂ
ಭದ್ರಂ ಶುಭಂ ಮಂಗಳಂ || ೭೭ ||

ಐದನೆಯ ಅಂಕವು ಮುಗಿದುದು.

ಸಂಪೂರ್ಣಂ.

PRINTED AT THE DHARMA PRAKASH PRESS, MANGALORE.

॥ ಶ್ರೀಃ ॥

ಶಿಷ್ಯವತ್ಸಲರೂ ಭಾಷಾಭಿಮಾನಿಗಳೂ ದೇಶಭಕ್ತರೂ ಆದ

ಶ್ರೀಯುತ

ರಾಜಗೋಪಾಲತಾತಾಚಾರ್ಯ,

ಎಂ. ಎ., ಎಲ್. ಟಿ., ಇವರ ಸನ್ನಿಧಿಯಲ್ಲಿ

ನಂಜನಗೂಡು ಮಾತೃಮಂದಿರಂ ವಿದ್ಯಾರ್ಥಿ ಸಂಘದವರ ಪರವಾಗಿ ಒಪ್ಪಿಸಿದ

ಅಭಿನಂದನಪತ್ರಿಕೆ

ತಾವು, ಕರ್ಣಾಟಕ ಮಾತೆಯ ಸತ್ಪುತ್ರರಾಗಿ ಜನ್ಮಧಾರಣೆ ಮಾಡಿದವರೂ ಕನ್ನಡ ನಾಡಿನಲ್ಲಿಯೇ ವಿದ್ಯಾಭ್ಯಾಸವನ್ನು ಪೂರ್ಣವಾಗಿ ಮಾಡಿ, ಹಿಂದೆಯೊಂದು ಕಾಲದಲ್ಲಿ ಅತ್ಯುನ್ನತಿಯನ್ನು ಹೊಂದಿದ ಹಳೆಗನ್ನಡ ವಾಙ್ಮಯವೆಲ್ಲವನ್ನೂ ಸಮಗ್ರವಾಗಿ ಸಮಾಲೋಚಿಸಿ ಪೂರ್ಣಪರಿಶ್ರಮವನ್ನು ಪಡೆದಿರುವವರೂ, ವ್ಯಾವಹಾರಿಕ ಭಾಷೆಯಲ್ಲಿಯೂ ಗಣಿತಶಾಸ್ತ್ರದಲ್ಲಿಯೂ ಎಮ್. ಎ, ಎಲ್. ಟಿ., ಎಂಬ ಪಟ್ಟಭದ್ರರಾಗಿಯೂ ಇನ್ನೂ ತೆಲಗು, ತಮಿಳು, ಕೊಡಗು, ಒಡಗು, ಸಂಸ್ಕೃತ ಮೊದಲಾದ ಭಾಷೆಗಳಲ್ಲಿಯೂ ತಕ್ಕಷ್ಟು ಪರಿಶ್ರಮವನ್ನು ಹೊಂದಿದವರಾಗಿಯೂ ಕರ್ಣಾಟಕ ಮಾತೆಯ ಸತ್ಪುತ್ರರಲ್ಲಿ ಅಲಂಕಾರಪ್ರಾಯರಾಗಿ ಪ್ರಕಾಶಿಸುತ್ತಿರುವಿರಿ.

ಇಂತು ಉದ್ದಾಮಪಂಡಿತರಾದ ತಮ್ಮನ್ನು ನಮ್ಮ ಕರ್ನಾಟಕ ಮಾತೆಯು ಪೋಷಿಸಲಾರದೆ ಆಂಧ್ರಮಾತೆಗೆ ಸ್ವೀಕಾರಕೊಟ್ಟಳೋ ಎಂಬಂತೆ ರಾಜಮಹೇಂದ್ರದ ಶಿಕ್ಷಕ ಶಿಕ್ಷಣ ಕಲಾಶಾಲೆಯಲ್ಲಿ (Teachers' College) ಉಪಾಧ್ಯಕ್ಷ (Vice Principal) ರಾಗಿದ್ದು ತಮ್ಮ ವಿದ್ಯಾಬುದ್ಧಿ ವಿವೇಕವನ್ನು ವಿನಿಯೋಗಿಸುತ್ತಿರುವುದಕ್ಕಾಗಿ ಕರ್ನಾಟಕ ಮಾತೆಯ ಮಕ್ಕಳಾಗಿರುವ ಈ ಸಂಘದ ವಿದ್ಯಾರ್ಥಿಗಳು ಅತ್ಯಂತ ಖಿನ್ನರಾಗಿರುವುದಲ್ಲದೆ, ತಮ್ಮ ಉಪದೇಶಾಮೃತವನ್ನು ಸ್ವೀಕರಿಸಿ, ದೇಶಭಕ್ತರೆನ್ನಿಸುವಂತಹ ಭಾಗ್ಯವನ್ನು ಪಡೆದಿರುವ ರಾಜಮಹೇಂದ್ರದ ವಿದ್ಯಾರ್ಥಿಗಳನ್ನು ಮನಃಪೂರ್ವಕವಾಗಿಯೂ ಅಭಿನಂದಿಸುತ್ತಿರುವರು.

ಪ್ರಸ್ತುತದಲ್ಲಿ ಮೈಸೂರು ದೇಶಕ್ಕೆ ಸೇರಿದ ಹಾಸನದಲ್ಲಿ ನಡೆಯುವುದಾಗಿರುವ ಕರ್ಣಾಟಕ ಸಾಹಿತ್ಯ ಸಮ್ಮೇಲನದ ಉದ್ದಿಶ್ಯ ಆಹ್ವಾನಿತರಾಗಿ ಸ್ವಂತ ಕಾರ್ಯಕಲಾಪವನ್ನು ಒತ್ತರಿಸಿ ಈ ಪ್ರಾಂತ್ಯ ದಯಮಾಡಿಸುವರೆಂದು ತಿಳಿದು ವಿದ್ಯಾರ್ಥಿಗಳು ಪ್ರಾರ್ಥಿಸಿದುದನ್ನು ಅನುಮೋದಿಸಿ ಇಲ್ಲಿಯವರೆಗೆ ದಯೆಮಾಡಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ತಮಗೆ ಈ ಸಂಘದವರೆಲ್ಲರೂ ಚಿರಕೃತಜ್ಞರಾಗಿರುವರು. ಮತ್ತು ಈ ಸುಯೋಗಕ್ಕಾಗಿ ಸಂತುಷ್ಟಚಿತ್ತರಾಗಿ ಅಘಟನಾಘಟನ ಸಮರ್ಥನಾದ ಭಗವಂತನಲ್ಲಿ ನಿಶ್ಚಲಭಕ್ತಿಯುಳ್ಳವರಾಗಿರುವರು.

ದಯಾಘನನಾದ ಭಗವಂತನು ತಮಗೆ ಆಯುರಾರೋಗ್ಯ ಭಾಗ್ಯವನ್ನು ವೃದ್ಧಿಪಡಿಸಿ, ಪುತ್ರಸಂತಾನವನ್ನಿತ್ತು ದೇಶಮಾತೆಯ ಸೇವೆಯಲ್ಲಿ ಇತೋಪ್ಯತಿಶಯವಾದ ಕೀರ್ತಿ, ಶಕ್ತಿ, ಕಾಂತಿಗಳನ್ನು ಅನುಗ್ರಹಿಸುತ್ತಿರಬೇಕೆಂದೂ ಇಂದಿನಂತೆಯೇ ತಮ್ಮ ಶಿಷ್ಯವಾತ್ಸಲ್ಯವು ಈ ಸಂಘದ ವಿದ್ಯಾರ್ಥಿಗಳಲ್ಲಿ ನಿರಂತರವೂ ದೃಢವಾಗಿರಲೆಂದೂ ಪ್ರಾರ್ಥಿಸುವೆವು.

ಇಂತಾಶಿಸುವ,

ವೆಂಕಟಕೃಷ್ಣಯ್ಯಂಗಾರ್,
ಮಾತೃಮಂದಿರಂ ವಿದ್ಯಾರ್ಥಿಸಂಘದ ಪ್ರೆಸಿಡೆಂಟ್.

ನಂಜನಗೂಡು
3–5–1919

ಕ್ರೌನ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.